ಸಂಪುಟ 01 । ಸಂಚಿಕೆ 224 ಭಾನುವಾರ 18 ಅಕ್ಟೋಬರ್ 2026 । ಪುಟ 4 । ಬೆಲೆ-2 ರೂ.

Posting registration number : RCR/RNP/116/2026-2028

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

ನೈಜ್ಯ ದೇಸೆ

NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ
ಮಾನ್ವಿ, ಲಿಂಗಸೂರು,
ರಾಯಚೂರ,ದೇವದುರ್ಗ
ಬಳ್ಳಾರಿ, ಕೊಪ್ಪಳ
ಯಾದಗಿರಿ, ಕಲಬುರ್ಗಿ,
ಬೀದರ, ವಿಜಯಪುರ.
ಗದಗ, ವಿಜಯನಗರ.
ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

ಈ ದಿನದ ವಿಶೇಷ

1)ವಿಶ್ವ ಮೆನೋಪಾಸ್ ದಿನ (World Menopause Day) ಮಹಿಳೆಯರ ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸುವ ದಿನ.

2)ವಿಶ್ವ ಆಟಿಕೆ ಕ್ಯಾಮೆರಾ ದಿನ (World Toy Camera Day) ಆಟಿಕೆ ಕ್ಯಾಮೆರಾಗಳ ಮೂಲಕ ಛಾಯಾಗ್ರಹಣದ ಹವ್ಯಾಸವನ್ನು ಆಚರಿಸುವ ದಿನ.

ಸುಭಾಷಿತ

ಮನುಷ್ಯನಲ್ಲಿರುವ ಪರಿಪೂರ್ಣತೆಯನ್ನು
ಹಿಗ್ಗಿಸುವುದೇ ನಿಜವಾದ ಶಿಕ್ಷಣ.

–ಸ್ವಾಮಿ ವಿವೇಕಾನಂದ

ಶಾಫಿ ಆಸ್ಪತ್ರೆಯ ಡಾ. ಸೈಯದ್ ಫುರ್ಖಾನ್ ಅಲಿಯಿಂದ ಸನ್ ರೈಸ್ ವಿದ್ಯಾರ್ಥಿಗಳಿಗೆ ಮಧುಮೇಹದ ಕುರಿತು ವಿಶೇಷ ಉಪನ್ಯಾಸ

❏ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ನಗರದ ಪ್ರತಿಷ್ಠಿತ ಸನ್ ರೈಸ್ ಡಿ-ಫಾರ್ಮಸಿ, ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕಾಲೇಜಿನ ವತಿಯಿಂದ ವಿದ್ಯಾರ್ಥಿಗಳಿಗೆ ವೈದ್ಯಕೀಯ ಕ್ಷೇತ್ರದ ಕುರಿತು ಪ್ರಾಯೋಗಿಕ ಜ್ಞಾನ ಮತ್ತು ಅರಿವು ಮೂಡಿಸುವ ಉದ್ದೇಶದಿಂದ ಪ್ರತೀ ಶನಿವಾರ ಆಯೋಜಿಸಲಾಗುವ ವಿಶೇಷ ಉಪನ್ಯಾಸ ಕಾರ್ಯಕ್ರಮದ ಅಂಗವಾಗಿ, ಅಕ್ಟೋಬರ್ 17ರ ಶನಿವಾರದಂದು ಸನ್ ರೈಸ್ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ಮಧುಮೇಹ (ಸಕ್ಕರೆ ಕಾಯಿಲೆ) ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮಕ್ಕೆ ಸಿಂಧನೂರಿನ ಶಾಫಿ ಆಸ್ಪತ್ರೆಯ ಮುಖ್ಯ ವೈದ್ಯರು, ಮಧುಮೇಹ ತಜ್ಞರು ಹಾಗೂ ಐಸಿಯು ಮತ್ತು ತೀವ್ರ ನಿಗಾ ಚಿಕಿತ್ಸಾ ತಜ್ಞರಾದ ಡಾ. ಸೈಯದ್ ಫುರ್ಖಾನ್ ಅಲಿ (MBBS, MD General Medicine, CPCDM) ಅವರು ಆಗಮಿಸಿ ವಿದ್ಯಾರ್ಥಿಗಳಿಗೆ ಮಧುಮೇಹದ ಕುರಿತು ಉಪಯುಕ್ತ ಮಾಹಿತಿಯನ್ನು ನೀಡಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಡಾ. ಸೈಯದ್ ಫುರ್ಖಾನ್ ಅಲಿ ಅವರು, ಇಂದಿನ ಬದಲಾಗುತ್ತಿರುವ ಜೀವನಶೈಲಿ, ಆಹಾರ ಪದ್ಧತಿ, ದೈಹಿಕ ಚಟುವಟಿಕೆಗಳ ಕೊರತೆ ಹಾಗೂ ಒತ್ತಡದ ಜೀವನದಿಂದಾಗಿ ಮಧುಮೇಹದ ಅಪಾಯ ಹೆಚ್ಚಾಗುತ್ತಿರುವ ಕುರಿತು ವಿದ್ಯಾರ್ಥಿಗಳಿಗೆ ವಿವರಿಸಿದರು. ಮಧುಮೇಹ ಎಂದರೇನು, ಅದು ಉಂಟಾಗಲು ಕಾರಣಗಳೇನು, ಕಾಯಿಲೆಯ ಆರಂಭಿಕ ಲಕ್ಷಣಗಳನ್ನು ಹೇಗೆ ಗುರುತಿಸಬೇಕು ಹಾಗೂ ಅದನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಯಾವ ರೀತಿಯ ಮುನ್ನೆಚ್ಚರಿಕೆಗಳನ್ನು ಅನುಸರಿಸಬೇಕು ಎಂಬುದರ ಕುರಿತು ಸಮಗ್ರವಾಗಿ ತಿಳಿಸಿಕೊಟ್ಟರು.

ಮಧುಮೇಹವನ್ನು ಆರಂಭಿಕ ಹಂತದಲ್ಲಿಯೇ ಪತ್ತೆಹಚ್ಚಿ ಸೂಕ್ತ ವೈದ್ಯಕೀಯ ಸಲಹೆ ಮತ್ತು ಚಿಕಿತ್ಸೆ ಪಡೆಯುವುದು ಅತ್ಯಂತ ಮುಖ್ಯವಾಗಿದ್ದು, ನಿಯಮಿತವಾಗಿ ರಕ್ತದಲ್ಲಿನ ಸಕ್ಕರೆ ಪ್ರಮಾಣವನ್ನು ಪರೀಕ್ಷಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಮಧುಮೇಹ ನಿಯಂತ್ರಣದಲ್ಲಿ ಆರೋಗ್ಯಕರ ಜೀವನಶೈಲಿಯ ಪಾತ್ರ ಬಹಳ ಮುಖ್ಯವಾಗಿದೆ. ಸಮತೋಲಿತ ಆಹಾರ ಸೇವನೆ, ಸಕ್ಕರೆ ಮತ್ತು ಸಂಸ್ಕರಿತ ಆಹಾರಗಳ ಅತಿಯಾದ ಬಳಕೆಯನ್ನು ಕಡಿಮೆ ಮಾಡುವುದು, ನಿಯಮಿತ ವ್ಯಾಯಾಮ, ಪ್ರತಿದಿನ ದೈಹಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು ಹಾಗೂ ದೇಹದ ತೂಕವನ್ನು ನಿಯಂತ್ರಣದಲ್ಲಿಟ್ಟುಕೊಳ್ಳುವುದು





ಆರೋಗ್ಯದ ದೃಷ್ಟಿಯಿಂದ ಅತ್ಯಗತ್ಯವೆಂದು ಅವರು ತಿಳಿಸಿದರು. ಮಧುಮೇಹವನ್ನು ನಿರ್ಲಕ್ಷಿಸಿದರೆ ಕಣ್ಣು, ಮೂತ್ರಪಿಂಡ, ಹೃದಯ ಹಾಗೂ ನರಮಂಡಲದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಯಿದ್ದು, ಕಾಯಿಲೆಯನ್ನು ನಿರ್ಲಕ್ಷಿಸದೆ ವೈದ್ಯರ ಸಲಹೆಯಂತೆ ಚಿಕಿತ್ಸೆ ಪಡೆದು ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಇದೇ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವದ ಕುರಿತು ಮಾತನಾಡಿದ ಅವರು, ವೈದ್ಯಕೀಯ ಕ್ಷೇತ್ರದಲ್ಲಿ ನರ್ಸ್‌ಗಳ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ವೈದ್ಯರು ನೀಡುವ ಚಿಕಿತ್ಸೆಯ ಜೊತೆಗೆ ರೋಗಿಗಳ ಆರೈಕೆ, ಔಷಧಿಗಳ ಸರಿಯಾದ ನಿರ್ವಹಣೆ, ರೋಗಿಗಳ ಆರೋಗ್ಯ ಸ್ಥಿತಿಯನ್ನು ಗಮನಿಸುವುದು, ತುರ್ತು ಸಂದರ್ಭಗಳಲ್ಲಿ ಸೂಕ್ತವಾಗಿ ಸ್ಪಂದಿಸುವುದು ಹಾಗೂ ರೋಗಿಗಳಿಗೆ ಮಾನಸಿಕ ಧೈರ್ಯ ತುಂಬುವಲ್ಲಿ ನರ್ಸ್‌ಗಳ ಸೇವೆ ಅಮೂಲ್ಯವಾಗಿದೆ ಎಂದು ತಿಳಿಸಿದರು. ನರ್ಸಿಂಗ್ ವಿದ್ಯಾರ್ಥಿಗಳು ಕೇವಲ ಪಠ್ಯಪುಸ್ತಕದ ಜ್ಞಾನಕ್ಕೆ ಸೀಮಿತವಾಗದೆ, ಪ್ರಾಯೋಗಿಕ ಜ್ಞಾನ, ಸೇವಾ ಮನೋಭಾವ, ಶಿಸ್ತು, ತಾಳ್ಮೆ ಮತ್ತು ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು.

ರೋಗಿಗಳೊಂದಿಗೆ ಪ್ರೀತಿಯಿಂದ ವರ್ತಿಸಿ, ಅವರ ನೋವು ಮತ್ತು ಸಮಸ್ಯೆಗಳನ್ನು ಅರ್ಥಮಾಡಿಕೊಂಡು ಸೇವೆ ಸಲ್ಲಿಸುವ ಮೂಲಕ ಉತ್ತಮ ಆರೋಗ್ಯ ಸೇವಕರಾಗಿ ರೂಪುಗೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸನ್ ರೈಸ್ ನರ್ಸಿಂಗ್ ಕಾಲೇಜಿನ ಉಪನ್ಯಾಸಕಿ ಶೋಭಾ ಅವರು ಮಾತನಾಡಿ, ಇಂದಿನ ದಿನಗಳಲ್ಲಿ ಮಧುಮೇಹವು ಅನೇಕ ಜನರನ್ನು ಬಾಧಿಸುತ್ತಿರುವ ಪ್ರಮುಖ ಆರೋಗ್ಯ ಸಮಸ್ಯೆಗಳಲ್ಲಿ ಒಂದಾಗಿದೆ. ಈ ಕಾಯಿಲೆಯ ಬಗ್ಗೆ ಜನರಲ್ಲಿ ಸರಿಯಾದ ಅರಿವು ಮೂಡಿಸುವುದು ಹಾಗೂ ಅದನ್ನು ತಡೆಗಟ್ಟಲು ಅಗತ್ಯವಾದ ಮುನ್ನೆಚ್ಚರಿಕೆಗಳನ್ನು ತಿಳಿಸುವುದು ಅತ್ಯಂತ ಮುಖ್ಯವಾಗಿದೆ ಎಂದು ಹೇಳಿದರು. ಆರೋಗ್ಯಕರ ಆಹಾರ ಪದ್ಧತಿ, ನಿಯಮಿತ ವ್ಯಾಯಾಮ, ವೈಯಕ್ತಿಕ ಆರೋಗ್ಯದ ಬಗ್ಗೆ ಕಾಳಜಿ ಮತ್ತು ಕಾಲಕಾಲಕ್ಕೆ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳುವ ಮೂಲಕ ಮಧುಮೇಹದ ಅಪಾಯವನ್ನು ಕಡಿಮೆ ಮಾಡಬಹುದು ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು ಎಂದು ತಿಳಿಸಿದರು.

ವೈದ್ಯಕೀಯ ಕ್ಷೇತ್ರದಲ್ಲಿ ಅನುಭವ ಹೊಂದಿರುವ ತಜ್ಞ ವೈದ್ಯರನ್ನು ಸಂಸ್ಥೆಗೆ ಆಹ್ವಾನಿಸಿ ವಿದ್ಯಾರ್ಥಿಗಳಿಗೆ ಇಂತಹ ಉಪಯುಕ್ತ ಉಪನ್ಯಾಸಗಳನ್ನು ಏರ್ಪಡಿಸುತ್ತಿರುವುದು ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಸಹಕಾರಿಯಾಗಿದೆ. ಇಂತಹ ಕಾರ್ಯಕ್ರಮಗಳಿಂದ ವಿದ್ಯಾರ್ಥಿಗಳಿಗೆ ಪಠ್ಯಕ್ರಮದ ಜೊತೆಗೆ ಪ್ರಾಯೋಗಿಕ ಜ್ಞಾನ ದೊರೆಯುವುದಲ್ಲದೆ, ವೈದ್ಯಕೀಯ ಕ್ಷೇತ್ರದಲ್ಲಿನ ಸವಾಲುಗಳು, ರೋಗಿಗಳ ಆರೈಕೆಯ ಜವಾಬ್ದಾರಿ ಹಾಗೂ ಭವಿಷ್ಯದಲ್ಲಿ ಉತ್ತಮ ಆರೋಗ್ಯ ಸೇವಕರಾಗಿ ಕಾರ್ಯನಿರ್ವಹಿಸಲು ಅಗತ್ಯವಾದ ಕೌಶಲ್ಯಗಳ ಕುರಿತು ಅರಿವು ಮೂಡುತ್ತದೆ. ಡಾ. ಸೈಯದ್ ಫುರ್ಖಾನ್ ಅಲಿ ಅವರು ನೀಡಿದ ಮಾರ್ಗದರ್ಶನ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಹೆಚ್ಚಿಸುವುದರ ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಪ್ರೇರಣೆ ನೀಡಿತು.

ಕಾರ್ಯಕ್ರಮದ ಕೊನೆಯಲ್ಲಿ ಸನ್ ರೈಸ್ ವಿದ್ಯಾಸಂಸ್ಥೆಯ ಪರವಾಗಿ ವೈದ್ಯರಾದ ಡಾ. ಸೈಯದ್ ಫುರ್ಖಾನ್ ಅಲಿ ಅವರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಯಿತು. ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ ಕೆ, ಕಾರ್ಯದರ್ಶಿಗಳಾದ ಇರ್ಷಾದ್ ಕೆ, ಫಾರ್ಮಸಿ ಕಾಲೇಜಿನ ಪ್ರಾಚಾರ್ಯರಾದ ವಾಸಿಂ ಹುಸೇನ್, ನರ್ಸಿಂಗ್ ಕಾಲೇಜಿನ ಪ್ರಾಚಾರ್ಯರಾದ ಲಾಜರ್ ಸಿರಿಲ್, ಪ್ಯಾರಾ ಮೆಡಿಕಲ್ ಕಾಲೇಜಿನ ಪ್ರಾಚಾರ್ಯರಾದ ಡಿ. ಚಕ್ರವರ್ತಿ, ಎಲ್ಲಾ ವಿಭಾಗಗಳ ಉಪನ್ಯಾಸಕರು ಹಾಗೂ ವಿದ್ಯಾರ್ಥಿಗಳ ಪರವಾಗಿ ವೈದ್ಯರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ಸನ್ ರೈಸ್ ವಿದ್ಯಾಸಂಸ್ಥೆಯು ಪ್ರತೀ ಶನಿವಾರ ಆಯೋಜಿಸುತ್ತಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ವೈದ್ಯಕೀಯ ಜ್ಞಾನ, ವೃತ್ತಿಪರ ಕೌಶಲ್ಯ, ಸಾಮಾಜಿಕ ಜವಾಬ್ದಾರಿ ಮತ್ತು ಸೇವಾ ಮನೋಭಾವವನ್ನು ಬೆಳೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ವಿದ್ಯಾರ್ಥಿಗಳಿಗೆ ಅನುಭವಿ ವೈದ್ಯರು ಹಾಗೂ ತಜ್ಞರಿಂದ ನೇರ ಮಾರ್ಗದರ್ಶನ ದೊರೆಯುವಂತೆ ಮಾಡುವ ಮೂಲಕ ಭವಿಷ್ಯದಲ್ಲಿ ಉತ್ತಮ ವೈದ್ಯಕೀಯ ಮತ್ತು ಆರೋಗ್ಯ ಸೇವಾ ವೃತ್ತಿಪರರನ್ನು ರೂಪಿಸುವ ನಿಟ್ಟಿನಲ್ಲಿ ಸಂಸ್ಥೆಯು ನಿರಂತರವಾಗಿ ಶ್ರಮಿಸುತ್ತಿದೆ.







ದೇಶದಲ್ಲಿನ ಆಂತರಿಕ ಭದ್ರತಾ ಸವಾಲು ಎರಿಸಲು ಸಿದ್ಧರಾಗಿ ; ಗೋವಿಂದ್ ಮೋಹನ್

❏ ನೈಜ್ಯ ದೇಸೆ ನ್ಯೂಸ್

ಹೈದರಾಬಾದ್: ದೇಶವು ದಶಕಗಳಿಂದ ಎದುರಿಸುತ್ತಾ ಬಂದಿದ್ದ ಸಾಂಪ್ರದಾಯಿಕ ಆಂತರಿಕ ಭದ್ರತಾ ಪರಿಸ್ಥಿತಿಯು ಈಗ ಬದಲಾಯಿಸಲಾಗದ ರೀತಿಯಲ್ಲಿ ಮಾರ್ಪಟ್ಟಿದೆ ಎಂದು ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಹೇಳಿದ್ದಾರೆ.



ಇಲ್ಲಿನ ಸರ್ದಾರ್ ವಲ್ಲಭಭಾಯಿ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ನಡೆದ ಐಪಿಎಸ್‌ನ 78ನೇ ನಿಯಮಿತ ನೇಮಕಾತಿ ಬ್ಯಾಚ್‌ನ ದೀಕ್ಷಾಂತ ಪರೇಡ್ (ತರಬೇತಿ ಮುಕ್ತಾಯ ಸಮಾರಂಭ) ಉದ್ದೇಶಿಸಿ ಮಾತನಾಡಿದ ಅವರು, ಆಂತರಿಕ ಭದ್ರತಾ ಸವಾಲುಗಳ ಪೈಕಿ ಉಗ್ರ ನಕ್ಸಲಿಸಂ ಸಂಪೂರ್ಣವಾಗಿ ಅಂತ್ಯಗೊಂಡಿದೆ ಮತ್ತು ಈಶಾನ್ಯ ಭಾರತದಲ್ಲಿನ ದಂಗೆಗಳು ಅತ್ಯಂತ ಕನಿಷ್ಠ ಮಟ್ಟಕ್ಕೆ ಇಳಿದಿವೆ ಎಂದು ತಿಳಿಸಿದರು. ದೇಶದ ಒಳಗೇ ಹುಟ್ಟಿಕೊಂಡ ಭಯೋತ್ಪಾದನೆ ಬಹುತೇಕ ಕೊನೆಗೊಂಡಿದೆ. ಹಾಗೆಯೇ, ವಿದೇಶಿ ಪ್ರೇರಿತ ಭಯೋತ್ಪಾದನೆಯೂ ದೇಶದ ಬೇರೆ ಯಾವುದೇ ಭಾಗದಲ್ಲಿ ಈಗ ಕಂಡುಬರುತ್ತಿಲ್ಲ ಎಂದು ಅವರು ಹೇಳಿದರು. ಮಾದಕವಸ್ತುಗಳ ಕಳ್ಳಸಾಗಣೆ, ಸೈಬರ್ ಅಪರಾಧಗಳು ಮತ್ತು ಅಕ್ರಮ ವಲಸೆಯಂತಹ ಹೊಸ ಆಂತರಿಕ ಭದ್ರತಾ ಸವಾಲುಗಳನ್ನು ಎದುರಿಸಲು ಸಿದ್ಧರಾಗುವಂತೆ ತರಬೇತಿ ಪೂರ್ಣಗೊಳಿಸಿದ ಐಪಿಎಸ್ ಅಧಿಕಾರಿಗಳಿಗೆ ಮೋಹನ್ ಕರೆ ನೀಡಿದರು.

ಕುಷ್ಟಗಿ ನಾಯಕವಾಡಿ ಓಣಿಯಲ್ಲಿ ಬನ್ನಿ ಮಹಾಕಾಳಿಗೆ ಮಹಾಅಭಿಷೇಕ, 250ಕ್ಕೂ ಹೆಚ್ಚು ಮಹಿಳೆಯರಿಗೆ ಉಡಿ ತುಂಬುವ ಕಾರ್ಯಕ್ರಮ

❏ ನೈಜ್ಯ ದೇಸೆ ನ್ಯೂಸ್

ಕುಷ್ಟಗಿ: ನವರಾತ್ರಿ ಹಬ್ಬದ ಅಂಗವಾಗಿ ಕುಷ್ಟಗಿ ನಗರದ 16ನೇ ವಾರ್ಡ್‌ನ ನಾಯಕವಾಡಿ ಓಣಿಯಲ್ಲಿ ಮಹಿಳೆಯರ ನೇತೃತ್ವದಲ್ಲಿ ಅ.16ರಂದು ಶುಕ್ರವಾರ ಸತತ 7ನೇ ವರ್ಷದ ಬನ್ನಿ ಮಹಾಕಾಳಿಯ ಮಹಾಅಭಿಷೇಕ ಹಾಗೂ ಉಡಿ ತುಂಬುವ ಕಾರ್ಯಕ್ರಮವನ್ನು ಭಕ್ತಿಭಾವದಿಂದ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಅಂಗವಾಗಿ ಬೆಳಿಗ್ಗೆ ಬನ್ನಿ ಮಹಾಕಾಳಿಗೆ ವಿಶೇಷ ಮಹಾಅಭಿಷೇಕ ಹಾಗೂ ಪೂಜಾ ಕಾರ್ಯಕ್ರಮಗಳು ಜರುಗಿದವು. ಸಂಜೆ 250ಕ್ಕೂ ಹೆಚ್ಚು ಮಹಿಳೆಯರಿಗೆ ಉಡಿ ತುಂಬುವ ಮೂಲಕ ಧಾರ್ಮಿಕ ಸಂಪ್ರದಾಯವನ್ನು ಆಚರಿಸಲಾಯಿತು. ಬಳಿಕ ಮಹಾಪ್ರಸಾದ ವಿತರಣೆ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ವಾರ್ಡ್‌ನ ಭಾಗ್ಯ ಸಂಗಮೇಶ ಕಂದಗಲ್, ನಾಯಕವಾಡಿ ಓಣಿಯ ಮಹಿಳೆಯರೆಲ್ಲರೂ ಒಗ್ಗೂಡಿ ಸತತ ಏಳನೇ ವರ್ಷವೂ ಬನ್ನಿ ಮಹಾಕಾಳಿಯ ಮಹಾಅಭಿಷೇಕ ಹಾಗೂ ಉಡಿ ತುಂಬುವ ಕಾರ್ಯಕ್ರಮವನ್ನು ಆಯೋಜಿಸುತ್ತಿರುವುದು ಸಂತಸ ತಂದಿದೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಭಾಗ್ಯ, ತನುಶ್ರೀ ಕಂದಗಲ್, ನಾಗಮ್ಮ, ಪಾರ್ವತಿ ದರೋಜಿ, ಅನ್ನಪೂರ್ಣ, ಮಲ್ಲಮ್ಮ, ಶಿಲ್ಪಾ, ಮಾಲಾ, ಸ್ವಪ್ನ, ಚೈತ್ರ, ನಿರ್ಮಲಾ, ಗಾಯತ್ರಿ, ಕವಿತಾ ನಾಯಕವಾಡಿ, ರಜನಿ ಮಂಗಳೂರು ಸೇರಿದಂತೆ ವಾರ್ಡ್‌ನ ಎಲ್ಲ ಮಹಿಳೆಯರು ಒಗ್ಗೂಡಿ ಯಶಸ್ವಿಯಾಗಿ ನಡೆಸಿಕೊಟ್ಟರು. ಕಾರ್ಯಕ್ರಮಕ್ಕೆ ಮಲ್ಲಿಕಾರ್ಜುನ ಭಜನಾ ಮಂಡಳಿ ಹಾಗೂ ಯುವಕ ಮಂಡಳಿಯ ಸದಸ್ಯರು ಸಹಕಾರ ನೀಡಿದರು ಎಂದು ಸಂಗಮೇಶ ಕಂದಗಲ್ ತಿಳಿಸಿದರು.





ಈಶಾನ್ಯ ಶಿಕ್ಷಕರ ಕ್ಷೇತ್ರ ಚುನಾವಣೆ: ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮುಟ್ಟೂರು ಪರ ಮತಯಾಚಿಸಿದ ಎ. ವಸಂತ್ ಕುಮಾರ್

❏ ನೈಜ್ಯ ದೇಸೆ ನ್ಯೂಸ್

ರಾಯಚೂರು: ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ ಹಿನ್ನೆಲೆಯಲ್ಲಿ ರಾಯಚೂರು ಜಿಲ್ಲೆಯ ಅಲ್ಪಸಂಖ್ಯಾತರ ಶಿಕ್ಷಣ ಸಂಸ್ಥೆಗಳ ಒಕ್ಕೂಟದ ವತಿಯಿಂದ ಸಭೆ ನಡೆಸಲಾಯಿತು. ಸಭೆಯಲ್ಲಿ ಎ. ವಸಂತ್ ಕುಮಾರ್ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಶ್ರೀ ಶರಣಪ್ಪ ಮುಟ್ಟೂರು ಅವರ ಪರ ಮತಯಾಚನೆ ಮಾಡಿದರು.

ಶಿಕ್ಷಣವನ್ನು ಬಲಪಡಿಸಲು ಮತ್ತು ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳನ್ನು ಮತ್ತಷ್ಟು ಎತ್ತರಕ್ಕೆ ಬೆಳೆಸಲು ಕಾಂಗ್ರೆಸ್ ಅಭ್ಯರ್ಥಿಯನ್ನು ಬೆಂಬಲಿಸಬೇಕು ಎಂದು ಕರೆ ನೀಡಿದರು. ಈ ಸಭೆಯಲ್ಲಿ ಜಿಲ್ಲೆಯ 50ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಕೆಪಿಸಿಸಿ ವಕ್ತಾರ ಡಾ. ರಜಾಕ್ ಉಸ್ತಾದ್, ಮಹಾನಗರ ಪಾಲಿಕೆ ಮಾಜಿ ಸದಸ್ಯರಾದ ಬಸವರಾಜ ದರೂರು, ರಾಮಕೃಷ್ಣ ನಾಯಕ, ಶಿಕ್ಷಣ ಸಂಸ್ಥೆಗಳ ಪದಾಧಿಕಾರಿಗಳಾದ ಮೊಹಮ್ಮದ್ ಇಕ್ಬಾಲ್, ಅಬ್ದುಲ್ ಹೈ ಫೆರೋಜ್, ಮೊಹಮ್ಮದ್ ಇಕ್ಬಾಲ್ ಕೋಸಗಿ, ಅಬ್ದುಲ್ ಸಮದ್, ಮೊಹಮ್ಮದ್ ಇಬ್ರಾಹಿಂ, ಸೈಯದ್ ಜುಬೇರ್, ಶೇಖ್ ಮಹಿಬೂಬ್, ಮೊಹಮ್ಮದ್ ಹಾರೂನ್, ಎಸ್.ಎ.ಹೆಚ್. ಮತವಾಲೆ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಸಿಂಧನೂರಿನಲ್ಲಿ ದಸರಾ ಉತ್ಸವದ ಪೂರ್ವಭಾವಿ ಸಭೆ: ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಭೇಟಿ ಸಿದ್ಧತೆ ಹಾಗೂ ಸ್ಥಳೀಯ ಚುನಾವಣೆಗಳ ಕುರಿತು ಚರ್ಚೆ

❏ ನೈಜ್ಯ ದೇಸೆ ನ್ಯೂಸ್

ಸಿಂಧನೂರು: ನಗರದ ಅನ್ನದಾನೇಶ್ವರ ಕಲ್ಯಾಣ ಮಂಟಪದಲ್ಲಿ ದಸರಾ ಉತ್ಸವದ ಪೂರ್ವಭಾವಿ ಸಭೆ ಹಾಗೂ ಮುಂಬರುವ ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳ ಹಿನ್ನೆಲೆಯಲ್ಲಿ ಮಹತ್ವದ ಸಭೆ ಜರುಗಿತು. ಸಭೆಯಲ್ಲಿ ದಸರಾ ಉತ್ಸವದ ಸಿದ್ಧತೆಗಳು, ಮುಖ್ಯಮಂತ್ರಿ ಅವರ ಸಿಂಧನೂರು ಭೇಟಿ ಹಾಗೂ ಪಕ್ಷದ ಸಂಘಟನೆಯನ್ನು ಬಲಪಡಿಸುವ ಕುರಿತು ಸುದೀರ್ಘ ಚರ್ಚೆ ನಡೆಸಲಾಯಿತು ಎಂದು ಶಾಸಕ ಹಂಪನಗೌಡ ಬಾದರ್ಲಿ ತಿಳಿಸಿದರು.

ದಿನಾಂಕ *30-10-2026ರಂದು ಮಾನ್ಯ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ಅವರು ಸಿಂಧನೂರು ನಗರಕ್ಕೆ ಆಗಮಿಸಲಿರುವ ಹಿನ್ನೆಲೆಯಲ್ಲಿ*, ಅವರ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ನಿಟ್ಟಿನಲ್ಲಿ ಕೈಗೊಳ್ಳಬೇಕಾದ ಸಿದ್ಧತೆಗಳ ಕುರಿತು ಸಭೆಯಲ್ಲಿ ಸಮಾಲೋಚನೆ ನಡೆಸಲಾಯಿತು. ಮುಖ್ಯಮಂತ್ರಿಗಳ ಭೇಟಿಯ ಸಂದರ್ಭದಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಭಾಗವಹಿಸುವಂತೆ ವ್ಯವಸ್ಥಿತವಾಗಿ ಕಾರ್ಯಕ್ರಮ ರೂಪಿಸುವುದು, ಕಾರ್ಯಕರ್ತರ ಸಭೆಯನ್ನು ಆಯೋಜಿಸುವುದು ಮತ್ತು ಅಗತ್ಯ ವ್ಯವಸ್ಥೆಗಳನ್ನು ಕಲ್ಪಿಸುವ ಕುರಿತು ಚರ್ಚಿಸಲಾಯಿತು. ದಸರಾ ಉತ್ಸವವನ್ನು ಯಶಸ್ವಿಗೊಳಿಸಲು ಸಿದ್ಧತೆ ದಸರಾ ಉತ್ಸವವು ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಧಾರ್ಮಿಕ ಭಾವನೆಗಳನ್ನು ಪ್ರತಿಬಿಂಬಿಸುವ ಪ್ರಮುಖ ಹಬ್ಬವಾಗಿದೆ.

ಸಿಂಧನೂರು ನಗರದಲ್ಲಿ ಉತ್ಸವವನ್ನು ಯಶಸ್ವಿಯಾಗಿ ಆಚರಿಸುವ ನಿಟ್ಟಿನಲ್ಲಿ ಪೂರ್ವಸಿದ್ಧತೆಗಳನ್ನು ಕೈಗೊಳ್ಳುವುದು, ಕಾರ್ಯಕ್ರಮಗಳ ಆಯೋಜನೆ ಹಾಗೂ ವಿವಿಧ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವ ಕುರಿತು ಸಭೆಯಲ್ಲಿ ಅಭಿಪ್ರಾಯಗಳನ್ನು ಹಂಚಿಕೊಳ್ಳಲಾಯಿತು. ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳ ಕುರಿತು ಚರ್ಚೆ ಮುಂಬರುವ ತಾಲೂಕು ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಚುನಾವಣೆಗಳ ಹಿನ್ನೆಲೆಯಲ್ಲಿ ಪಕ್ಷದ ಸಂಘಟನೆಯನ್ನು ತಳಮಟ್ಟದಿಂದ ಬಲಪಡಿಸುವುದು, ಕಾರ್ಯಕರ್ತರನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳುವುದು ಹಾಗೂ ಮುಖಂಡರು ಮತ್ತು ಕಾರ್ಯಕರ್ತರ ನಡುವೆ ಸಮನ್ವಯ ಸಾಧಿಸುವ ಕುರಿತು ಚರ್ಚಿಸಲಾಯಿತು.

ಚುನಾವಣೆಗಳ ಸಂದರ್ಭದಲ್ಲಿ ಪಕ್ಷದ ಸಂಘಟನಾತ್ಮಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡುವುದು, ಜನರೊಂದಿಗೆ ನಿರಂತರ ಸಂಪರ್ಕದಲ್ಲಿರುವುದು ಮತ್ತು ಸ್ಥಳೀಯ ಮಟ್ಟದಲ್ಲಿ ಪಕ್ಷದ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸುವ ಅಗತ್ಯದ ಬಗ್ಗೆಯೂ ಸಮಾಲೋಚನೆ ನಡೆಯಿತು. ಮುಖಂಡರು, ಕಾರ್ಯಕರ್ತರ ಉಪಸ್ಥಿತಿ ಸಭೆಯಲ್ಲಿ ಪಕ್ಷದ ಮುಖಂಡರು, ಕಾರ್ಯಕರ್ತರು ಹಾಗೂ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದು, ದಸರಾ ಉತ್ಸವದ ಆಯೋಜನೆ, ಮುಖ್ಯಮಂತ್ರಿಗಳ ಕಾರ್ಯಕ್ರಮದ ಸಿದ್ಧತೆ ಮತ್ತು ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದರು.

ಒಟ್ಟಾರೆ, ಸಿಂಧನೂರು ನಗರದಲ್ಲಿ ನಡೆಯಲಿರುವ ದಸರಾ ಉತ್ಸವವನ್ನು ಯಶಸ್ವಿಗೊಳಿಸುವುದರ ಜೊತೆಗೆ ಮುಖ್ಯಮಂತ್ರಿ ಅವರ ಭೇಟಿಯನ್ನು ಅಚ್ಚುಕಟ್ಟಾಗಿ ಆಯೋಜಿಸಲು ಹಾಗೂ ಮುಂಬರುವ ತಾಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಚುನಾವಣೆಗಳ ಹಿನ್ನೆಲೆಯಲ್ಲಿ ಪಕ್ಷದ ಸಂಘಟನೆಯನ್ನು ಮತ್ತಷ್ಟು ಬಲಪಡಿಸಲು ಈ ಸಭೆ ಮಹತ್ವದ್ದಾಯಿತು.



ಸಾಹಿತ್ಯ ಸಿಂಚನ

ವಿಧಿಯ ತಿರುವಿನಲ್ಲಿ

ವಿಧಿಯ ತಿರುವಿನಲ್ಲಿ ಹೆಜ್ಜೆಯಿಟ್ಟಾಗ,
ಹೊಸ ಕನಸುಗಳು ಕಣ್ಣ ಮುಂದೆ ಮೂಡಿದಾಗ.
ಕಾಲದ ಆಟದಲ್ಲಿ ದಾರಿಗಳು ಬದಲಾದವು,
ಮನದ ಆಸೆಗಳು ಮೌನವಾಗಿ ಉಳಿದವು.

ನಂಬಿಕೆಯ ದೀಪವು ಗಾಳಿಗೆ ನಡುಗಿತು,
ಕನಸಿನ ಹಾದಿಯಲಿ ಕತ್ತಲು ಕವಿಯಿತು.
ಬಯಸಿದ ಬದುಕು ಕೈಜಾರಿ ಹೋದರೂ,
ಹೊಸ ಭರವಸೆಯೊಂದು ಮನದಲ್ಲಿ ಮೂಡಿತು.

ವಿಧಿಯು ಬರೆದ ಕಥೆ ಅರಿಯದ ಮನಕೆ,
ಕಣ್ಣೀರ ಹನಿಗಳೇ ಉತ್ತರವಾದವು.
ಸೋಲುಗಳ ನಡುವೆಯೂ ನಗುವನು ಹುಡುಕಿ,
ಹೃದಯದ ನೋವಿಗೆ ಧೈರ್ಯವೇ ಮದ್ದಾಯಿತು.

ತಿರುವುಗಳ ದಾರಿಯಲ್ಲಿ ಒಂಟಿಯಾಗಿ ನಡೆದರೂ,
ನೆನಪುಗಳ ನೆರಳಲ್ಲಿ ಬದುಕನ್ನು ಕಂಡೆನು.
ಕಳೆದುಹೋದ ಕ್ಷಣಗಳ ಪಾಠವನು ಕಲಿತು,
ಹೊಸ ಬೆಳಕಿನ ಕಡೆಗೆ ಹೆಜ್ಜೆಯನು ಇಟ್ಟೆನು.

ವಿಧಿಯ ತಿರುವುಗಳು ದಾರಿಯ ಅಂತ್ಯವಲ್ಲ,
ಬದುಕಿನ ಹೊಸ ಅಧ್ಯಾಯದ ಆರಂಭವಷ್ಟೇ.
ಕಾಲವು ಬದಲಾದರೂ ಕನಸು ಬದಲಾಗದಿರಲಿ,
ನಂಬಿಕೆಯ ಬೆಳಕಿನಲ್ಲಿ ನಾಳೆ ಸುಂದರವಾಗಲಿ.

ಕೆಂಭಾವಿ ಪೊಲೀಸ್ ಠಾಣೆ ಶಹಾಪುರ ಸರ್ಕಲ್ ಆಫೀಸ್ ಸೇರಿಸಿದ್ದು ಏತಕ್ಕೆ – ರಾಜಶೇಖರ ಗೌಡ ಪಾಟೀಲ್ ಅಗ್ನಿ

ನೈಜ್ಯ ದೆಸೆ ನ್ಯೂಸ್

ಯಾದಗಿರಿ: ಜಿಲ್ಲೆಯ ಸುರಪುರ ತಾಲೂಕಿನಲ್ಲಿ ಬರುವ ಕೆಂಭಾವಿ ಪೊಲೀಸ್ ಠಾಣೆಗೆ ಶಾಹಪುರ ಸರ್ಕಲ್ ಆಫೀಸ್ಗೆ ಸೇ–ರಿಸಿದ್ದು ಎದುರ ಸಲುವಾಗಿ ಅನ್ನುವುದು ಪೊಲೀಸ್ ಇಲಾಖೆ ಕಾರಣ ಹೇಳಬೇಕು ಎಂದು ರಾಜಶೇಖರ್ ಗೌಡ ಪಾಟೀಲ್ ಅಗ್ನಿ ಇವರು ಪೋಲಿಸ್ ಇಲಾಖೆಗೆ ಪ್ರಶ್ನೆ ಮಾಡಿದರು.



ಕೆಂಭಾವಿ ಪೊಲೀಸ್ ಠಾಣೆಯು ಹುಣಸಿಗಿ ತಾಲೂಕಿನ ಕೆಲವು ಹಳ್ಳಿಗಳು ಬರುತ್ತವೆ ಮತ್ತು ಸುರಪುರ ತಾಲೂಕಿನ ಕೆಲವು ಹಳ್ಳಿಗಳು ಬರುತ್ತವೆ ಆದ–ರೆ ಶಾಹಪುರ್ ತಾಲೂಕು ನ ಒಂದು ಹಳ್ಳಿಯು ಬರುವುದಿಲ್ಲ ಆದರೆ ಶಾಹಪುರ್ ಸರ್ಕಲ್ ಆಫೀಸ್ಗೆ ಕೆಂಭಾವಿ ಪೊಲೀಸ್ ಠಾಣೆ ಕಳಿಸುವುದು ಯಾವ ಲೆಕ್ಕ. ಸವಿಧಾನದಲ್ಲಿ ಇದೆ ಇದೆಯೋ ಅನ್ನುವುದೇ ಗೊತ್ತಾಗುತ್ತೆ ಇಲ್ಲ ಎಂದು ಹೇಳಿದರು. ಹುಣಸಿಗಿ ತಾಲೂಕಿನ 25 ಹಳ್ಳಿಗಳು ಬರುತ್ತವೆ ಮತ್ತು ಶಾಪುರ್ ತಾಲೂಕಿನ 25 ಹಳ್ಳಿಗಳು ಬರುತ್ತವೆ ನಮಗೆ ಹುಣಸಗಿ ಸರ್ಕಲ್ ಆಫೀಸ್ ಮೊದಲಿನಿಂದ ಇದೆ ಆದರೆ ಇವರು ನಮಗೆ ಗಾಯ ಇಲಾಖೆಯವರು ಮಲತಾಯಿ ಧೋರಣೆ ತೋರುತ್ತಿದ್ದಾರೆ. ನಮಗೆ ಹುಣಸಿಗಿ ತಾಲೂಕು ಕೆಂಭಾವಿ ಪೊಲೀಸ್ ಸರ್ಕಲ್ ಇನ್ಸ್ಪೆಕ್ಟರ್ ಆಫೀಸ್ ಠಾಣೆಯಿಂದ 20 ಕಿಲೋಮೀಟರ್ ಇದೆ. ಶಹಾಪುರ ಸರ್ಕಲ್ ಇನ್ಸ್ಪೆಕ್ಟರ್ ಆಫೀಸ್ 63 ಕಿಲೋಮೀಟರ್ ಇದೆ. ಯಾವುದೇ ಕೆಲಸಗಳಿಗೆ ಹೋಗಬೇಕಾದರೆ ಒಂದು ದಿನ ಕಾಲಹರಣ ಮಾಡಬೇಕಾಗುತ್ತದೆ. ಕೂಡಲೇ ಸರ್ಕಾರ ಮತ್ತು ಗ್ರಹ ಇಲಾಖೆ ಮತ್ತು ಸ್ಥಳೀಯ ಶಾಸಕರು ಇದರ ಬಗ್ಗೆ ಗಮನ ಹರಿಸಿ. ಕೆಂಭಾವಿ ಪೊಲೀಸ್ ಠಾಣೆಯನ್ನು ಹುಣಸಗಿ ಸರ್ಕಲ್ ಆಫೀಸಿಗೆ ಸೇರಿಸಬೇಕೆಂದು ಮನವಿ ಮಾಡುತ್ತೇನೆ ಎಂದು ಹೇಳಿದರು. ನಮ್ಮ ಮನವಿಗೆ ಏನಾದರೂ ಸ್ಪಂದಿಸದಿದ್ದರೆ ಮುಂದಿನ ದಿನಮಾನಗಳಲ್ಲಿ ಹುಣಸಗಿ ಟು ಕೆಂಭಾವಿ ಮತ್ತು ದೇವಪುರ ಟು ಮನಗೂಳಿ ಹೆದ್ದಾರಿಯನ್ನು ತಡೆದು ಉಗ್ರ ಹೋರಾಟ ಮಾಡಲಾಗುವುದೆಂದು ಎಚ್ಚರಿಸಿದರು. ಇದೇ ಸಂದರ್ಭದಲ್ಲಿ ಹುಣಸಗಿ ತಾಲೂಕಿನ ಹಲವು ಊರಿನ ಗ್ರಾಮಸ್ಥರು ಮತ್ತು ಹಲವು ಸಂಘಟನೆಯ ಮುಖಂಡರು ಮಾಧ್ಯಮಗೋಷ್ಠಿಯಲ್ಲಿ ಪಾಲ್ಗೊಂಡಿದ್ದರು.

ಸಾಮಾನ್ಯ ಅರ್ಚಕರಾಗಿ ವೇ. ಮೂ. ಅಮರಯ್ಯ ಸ್ವಾಮಿಯವರು ಕಾರುಣ್ಯಾಶ್ರಮ ಹುಟ್ಟು ಹಾಕಿದ್ದು ಇತಿಹಾಸವೇ ಸರಿ – ಮಂಜುನಾಥ ಗಾಣಿಗೇರ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಸಿಂಧನೂರು ತಾಲೂಕ ಹಾಗೂ ಸರ್ವೇಶ ಜವಳಿ ಸ್ನೇಹ ಬಳಗ ಸಿಂಧನೂರು ವತಿಯಿಂದ ಸರ್ವೇಶ ಜವಳಿ ಅವರ ಜನ್ಮ ಸಾರ್ಥ–ಕ ದಿನವನ್ನು ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್ (ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಲ್ಲಿ ಮಹಾಪ್ರಸಾದ ಸೇವೆ ಹಣ್ಣು ಹಂಪಲುಗಳನ್ನು ವಿತರಿಸುವ ಮೂಲಕ ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಕಾರ್ಯಕ್ರಮದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ಸಿಂಧನೂರು ತಾಲೂಕಾಧ್ಯಕ್ಷರಾದ ಮಂಜುನಾಥ ಗಾಣಿಗೇರ ಹಾಗೂ ಕಾರುಣ್ಯಾಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಇವರುಗಳು ಸರ್ವೇಶ ಜವಳಿ ಅವ–ರಿಗೆ ಕರುನಾಡಿನ ಕಾರುಣ್ಯ ಕಣ್ಮಣಿಗಳು ಎನ್ನುವ



ಶ್ರೇಷ್ಠ ಅಭಿಧಾನದೊಂದಿಗೆ ಗೌರವಿಸಿದರು.

ನಂತರ ಕರವೇ ಸ್ವಾಭಿಮಾನಿ ಬಣದ ತಾಲೂಕ ಅಧ್ಯಕ್ಷರಾದ ಮಂಜುನಾಥ ಗಾಣಿಗೇರ ಮಾತನಾಡಿ ಸಮಾಜದ ಹಲವಾರು ಟಿ.ಕೆ. ಟಿಪ್ಪಣಿ ಅವಮಾನ ಅಪಪ್ರಚಾರಗಳು ಕಾರುಣ್ಯ ಕುಟುಂಬದ ಸೇವೆಗೆ ಸ್ಪೂರ್ತಿಯಾಗಿವೆ. ಇಂದಿನ ಈ ಸ್ವಾರ್ಥ ಜಗತ್ತಿನಲ್ಲಿ ನಿಸ್ವಾರ್ಥತೆಯ ಪಾಠವನ್ನು ಕಾರುಣ್ಯ ಆಶ್ರಮದಲ್ಲಿ ಕಲಿಯಬೇಕು ಸಾಮಾನ್ಯ ಅರ್ಚಕರಾಗಿ ವೇ.ಮೂ. ಅಮರಯ್ಯ ಸ್ವಾಮಿಯವರು ಕಾರುಣ್ಯಾಶ್ರಮವನ್ನು ಹುಟ್ಟುಹಾಕಿದ್ದು ಇತಿಹಾಸವೇ ಸರಿ.

ಮಾನವ ಧರ್ಮದ ಮಾನವೀಯತೆ ಮಂದಿರವೇ ನಮ್ಮ ಕಾರುಣ್ಯಾಶ್ರಮ ನಾವು ಸುಮಾರು ವರ್ಷಗಳಿಂದ ಕಾರುಣ್ಯ ಆಶ್ರಮದ ಸೇವೆಯ ಜೊತೆಗಿದ್ದು ಮಕ್ಕಳಾದವರು ಹೆತ್ತವರನ್ನು ನಮ್ಮಂತಹ ವೃದ್ಧಾಶ್ರಮಗಳಿಗೆ ತಳ್ಳಬೇಡಿ ಎನ್ನುವ ಹಲವಾರು ಅಭಿಯಾನಗಳಲ್ಲಿ ಭಾಗವಹಿಸಿದ್ದೇವೆ. ಇಂತಹ ಒಂದು ಪುಣ್ಯಕ್ಷೇತ್ರದಲ್ಲಿ ನಮ್ಮ ಸರ್ವೇಶ ಜವಳಿ ಕಡುಬಡತನದಲ್ಲಿದ್ದರೂ ಕೂಡ ಸಮಾಜದಲ್ಲಿರುವ ಅನಾಥರಿಗೆ ನೊಂದದವ–ರಿಗೆ ಸಹಾಯ ಸಹಕಾರ ಮಾಡುವಂತಹ ಕರುಣಾಮಯಿಗಳಾಗಿದ್ದಾರೆ. ಇವರ ಕುಟುಂಬಕ್ಕೆ ಕಾರುಣ್ಯ ಕುಟುಂಬದ ಕೂಸುಗಳ ಆಶೀರ್ವಾದವಿರಲಿ ಎನ್ನುವ ವಿನಂತಿ ನಮ್ಮೆಲ್ಲರದ್ದು.

ನಾವು ಸದಾವಕಾಲ ಕಾರುಣ್ಯ ಆಶ್ರಮದ ಜೊತೆಗಿರುತ್ತೇವೆ ಎಂದು ಮಾತನಾಡಿ ಸರ್ವೇಶ ಜವಳಿ ಅವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಕುಮಾರ ಪಾಟೀಲ್ ಕೆ. ಬಸಾಪುರ. ಮಹೇಶ ಕೆ. ಬಸಾಪುರ. ರುದ್ರಗೌಡ ಪಾಟೀಲ್ ಸಿಂಧನೂರು. ಶ್ರೀಕಾಂತ್ ಜವಳಿ. ಬಾಪುರೆಡ್ಡಿ. ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ. ಸಿದ್ದಯ್ಯ ಸ್ವಾಮಿ. ಮರಿಯಪ್ಪ.ವಿದ್ಯಾಶ್ರೀ. ಶಂಕ್ರಮ್ಮ. ಶರಣು ಸ್ವಾಮಿ. ಬಸವ ಸ್ವಾಮಿ. ಹಾಗೂ ಅನೇಕರು ಭಾಗವಹಿಸಿದ್ದರು.

ಮಲ್ಲಿಕಾರ್ಜುನ ಹಾರ್ಡ್‌ವೇರ್‌ಗೆ 'ಬೆಸ್ಟ್ ಡೀಲರ್ ಅವಾರ್ಡ್' ಪ್ರದಾನ

ಕನ್ನಡ ಚಿತ್ರನಟಿ ನಿಧಿ ಸುಬ್ಬಯ್ಯ ಅವರಿಂದ ಪ್ರಶಸ್ತಿ ಪ್ರದಾನ; ಅಭಿಮಾನಿಗಳಿಂದ ಅದ್ಧೂರಿ ಸ್ವಾಗತ



ನೈಜ್ಯ ದೆಸೆ ನ್ಯೂಸ್

ಕುಷ್ಟಗಿ: ಪಟ್ಟಣದ ಏಷ್ಯನ್ ಪೇಂಟ್ಸ್ ಉತ್ಪನ್ನಗಳ ಅಧಿಕೃತ ಮಾರಾಟಗಾರರಾದ ಶ್ರೀ ಮಲ್ಲಿಕಾರ್ಜುನ ಹಾರ್ಡ್‌ವೇರ್, ಏಷ್ಯನ್ ಪೇಂಟ್ಸ್ ಉತ್ಪನ್ನಗಳ ಮಾರಾಟದಲ್ಲಿ ಅತ್ಯುತ್ತಮ ಸಾಧನೆಗೈದು, ಅತಿ ಹೆಚ್ಚು ಮಾರಾಟ ಮಾಡಿದ ಸಾಧನೆಗಾಗಿ ಪ್ರತಿಷ್ಠಿತ 'ಬೆಸ್ಟ್ ಡೀಲರ್ ಅವಾರ್ಡ್'ಗೆ ಭಾಜನರಾಗಿದ್ದಾರೆ.

ಈ ಹಿನ್ನೆಲೆಯಲ್ಲಿ ಕನ್ನಡ ಚಿತ್ರರಂಗದ ಖ್ಯಾತ ನಟಿ ನಿಧಿ ಸುಬ್ಬಯ್ಯ ಅವರು ಕುಷ್ಟಗಿಗೆ ಆಗಮಿಸಿ, ಮಲ್ಲಿಕಾರ್ಜುನ ಹಾರ್ಡ್‌ವೇರ್‌ನ ಪೇಂಟ್ ಮಳಿಗೆಗೆ ಭೇಟಿ ನೀಡಿ, ಅತ್ಯುತ್ತಮ ಮಾರಾಟ ಸಾಧನೆಗಾಗಿ ಪ್ರಶಸ್ತಿ ಪ್ರದಾನ ಮಾಡಿದರು. ಈ ಸಂದರ್ಭದಲ್ಲಿ ಮಳಿಗೆಯ ಮಾಲೀಕರು ಹಾಗೂ ಸಿಬ್ಬಂದಿಯನ್ನು ಅಭಿನಂದಿಸಿ, ಮುಂದಿನ ದಿನಗಳಲ್ಲಿಯೂ ಇದೇ ರೀತಿಯ ಸಾಧನೆ ಮುಂದುವರಿಸುವಂತೆ ಶುಭ ಹಾರೈಸಿದರು. ನಂತರ ಮಾತನಾಡಿದ ನಟಿ ನಿಧಿ ಸುಬ್ಬಯ್ಯ ಅವರು, ಹೊಸದಾಗಿ ಮನೆ ನಿರ್ಮಿಸುವವರು ಉತ್ತಮ ಗುಣಮಟ್ಟದ ಬ್ರ್ಯಾಂಡೆಡ್ ಪೇಂಟ್‌ಗಳನ್ನು ಬಳಸಬೇಕು. ಮನೆಯ ಸೌಂದರ್ಯ ಮತ್ತು ಗುಣಮಟ್ಟಕ್ಕೆ ಆದ್ಯತೆ ನೀಡುವುದರ ಜೊತೆಗೆ, ಸ್ಥಳೀಯ ವ್ಯಾಪಾರವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಸ್ಥಳೀಯ ಮಳಿಗೆಗಳಲ್ಲಿಯೇ ಪೇಂಟ್ ಖರೀದಿಸುವಂತೆ ಗ್ರಾಹಕರಿಗೆ ಸಲಹೆ ನೀಡಿದರು.

ಅಭಿಮಾನಿಗಳ ಸಂಭ್ರಮ: ನೆಚ್ಚಿನ ನಟಿ ನಿಧಿ ಸುಬ್ಬಯ್ಯ ಅವರನ್ನು ಹತ್ತಿರದಿಂದ ನೋಡಲು ಹಾಗೂ ಅವರೊಂದಿಗೆ ಫೋಟೋಗಳನ್ನು ಕ್ಲಿಕ್ಕಿಸಿಕೊಳ್ಳಲು ಮಳಿಗೆಯ ಸುತ್ತಮುತ್ತ ಅಪಾರ ಸಂಖ್ಯೆಯಲ್ಲಿ ಸಾರ್ವಜನಿಕರು ಮತ್ತು ಅಭಿಮಾನಿಗಳು ಜಮಾಯಿಸಿದ್ದರು. ನಟಿಯ ಆಗಮನದಿಂದ ಕುಷ್ಟಗಿ ಪಟ್ಟಣದಲ್ಲಿ ಸಂಭ್ರಮದ ವಾತಾವರಣ ನಿರ್ಮಾಣವಾಗಿತ್ತು. ಈ ಸಂದರ್ಭದಲ್ಲಿ ಮಲ್ಲಿಕಾರ್ಜುನ ಹಾರ್ಡ್‌ವೇರ್‌ನ ಡೀಲರ್‌ಗಳಾದ ವಿಶ್ವನಾಥ ಬ್ಯಾಳಿ, ದೊಡ್ಡಬಸವನಗೌಡ ಪಾಟೀಲ ಬಯ್ಯಾಪುರ, ಕಲ್ಲೇಶ ತಾಳದ, ಉಮೇಶ ಮಂಗಳೂರು, ಬಸವರಾಜ ಹೊರಪೇಟಿ, ಚನ್ನಬಸಪ್ಪ ನಾಯಕವಾಡಿ, ರಾಚಪ್ಪ ಬ್ಯಾಳಿ, ಸುಭಾನಿ ಆರ್.ಟಿ., ನೀಪಸಿಂಗ್, ಸುಮಾ ಬ್ಯಾಳಿ ರವೀಂದ್ರ ಬಾಕಳೆ ಸೇ–ರಿದಂತೆ ನಗರದ ವಿವಿಧ ಪೇಂಟ್ ಮಳಿಗೆಗಳ ಮಾಲೀಕರು ಉಪಸ್ಥಿತರಿದ್ದರು.

ಸಮಾಜದ ಜೀವಂತಿಕೆಗೆ ಚಳುವಳಿಗಳೇ ಆಧಾರ: ಡಾ.ಅರ್ಜುನ ಗೊಳಸಂಗಿ ಅಭಿಪ್ರಾಯ.

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಮನುಷ್ಯ ವಿರೋಧಿ ಜಾತಿ ಆಧಾರಿತ ಸಮಾಜದಲ್ಲಿ ಚಳುವಳಿಗಳು ಸದಾ ಕಾಲ ಕಾಲಕ್ಕೆ ಮಾನವೀಯ ಚಿಂತನೆಗಳು ಬಿತ್ತುತ್ತಾ ಮನುಷ್ಯ ಕೇಂದ್ರಿತ ಸಮಾಜ ನಿರ್ಮಿಸುವಲ್ಲಿ ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ ಎಂದು ದಲಿತ ಸಾಹಿತ್ಯ ಪರಿಷತ್ತಿನ ರಾಜ್ಯ ಘಟಕದ ಅಧ್ಯಕ್ಷ ಡಾ. ಅರ್ಜುನ ಗೋಳಸಂಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ದಲಿತ ಸಾಹಿತ್ಯ ಪರಿಷತ್ತು ಮತ್ತು ದಲಿತ ಸಾಹಿತ್ಯ ಪರಿಷತ್ತು ಕಲ್ಬುರ್ಗಿ ವಿಭಾಗ ಹಾಗೂ ದಲಿತ ಸಾಹಿತ್ಯ ಪರಿಷತ್ತು ರಾಯಚೂರು ಹಾಗೂ ತಾಲೂಕು ಘಟಕದ ವತಿಯಿಂದ ತಾಲೂಕಿನ ಜಾಲಿಹಾಳ ಗ್ರಾಮದ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ಅ.17 ಮತ್ತು 18 ಎರಡು ದಿನಗಳ ಕಾಲ ನಡೆಯುವ ಜಾತಿ ವಿನಾಶ ಚಳುವಳಿ ಮುಂದಿನ ಹೆಜ್ಜೆಗಳು ಎಂಬ ಅಧ್ಯಯನ ಶಿಬಿರವನ್ನು ಉದ್ಘಾಟಿಸಿ ಮಾತನಾಡಿದರು. ಸಮಾಜದಲ್ಲಿ ಜಾತಿ ವ್ಯವಸ್ಥೆ ಯಾವ ರೀತಿಯಲ್ಲಿ ಜನ್ಮ ತಾಳಿತು ಕಾಲ ಕಾಲಕ್ಕೆ ಅದು ಸಮಾಜದ ಮೇಲೆ ಎಂತಹ ಪರಿಣಾಮ ಬೀರುತ್ತಾ ಜಾತಿಯು ಸಾಮಾಜಿಕ ಪಿಡುಗಾಗಿ ರೂಪ ತಾಳಿರುವ ಬಗ್ಗೆ ತಿಳಿಸಿ, ನಿವಾರಣೆಗಾಗಿ ಬುದ್ಧ, ಬಸವ, ಅಂಬೇಡ್ಕರ್, ಚಿಂತನೆಗಳ ಚಳುವಳಿಯನ್ನು ರೂಪಿಸಿ, ಸಮ ಸಮಾಜದ ನಿರ್ಮಾಣಕ್ಕಾಗಿ ಪಣತೊಟ್ಟು ನಿಂತಿರುವುದು ಬಹುಮುಖ್ಯವಾದ ಸಂಗತಿ ಎಂದರು.



ಶಿಬಿರದ ನಿರ್ದೇಶಕ ತಾಯಿರಾಜ್ ಮರ್ಚೆಂಟ್ಹಾಳ ಮಾತನಾಡಿ, ಸಮಾಜದಲ್ಲಿ ನಡೆಯುವ ಜಾತಿ ವ್ಯವಸ್ಥೆಯ ಕರಾಳತೆಯ ವಿರುದ್ಧ ಹೋರಾಟ ರೂಪಿಸಲು ಆಲೋಚನಾ ಕ್ರಮದ ನಿರ್ಮಾಣ–ಕ್ಕಾಗಿ ಇಂತಹ ಶಿಬಿರಗಳು ಅಗತ್ಯ ಎಂದರು. ಈ ಶಿಬಿರದ ಮೊದಲನೆಯ ಗೋಷ್ಠಿಯ ಸಂಪನ್ಮೂಲ ವ್ಯಕ್ತಿಗಳಾದ ಡಾ.ವೈ.ಎಂ.ಭಜಂತ್ರಿ ಅವರು ವಚನ ಪೂರ್ವ ಚಿಂತನೆಗಳು ಎಂಬ ವಿಷಯದ ಮೇಲೆ ಪ್ರಬಂಧವನ್ನು ಮಂಡಿಸಿ ಬೌದ್ಧ ಮತ್ತು ಜೈನ ಚಿಂತನೆಗಳು ವಚನ ಚಳುವಳಿಗೆ ಪ್ರೇರಣೆಯಾಗಿವೆ. ಹಾಗೂ ಮನುಷ್ಯನ ಕು–ರಿತಾಗಿ ಮೊದಲು ಮಾತನಾಡಿದ್ದು, ಆದಿಕವಿ ಪಂಪಾ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದು ಮೊದಲು ಬೌದ್ಧ ಧರ್ಮ ಎಂದರು.

ಎರಡನೆಯ ಚಿಂತನಾಗೋಷ್ಠಿಯಲ್ಲಿ ಡಾ.ಎಚ್.ಬಿ. ಕೋಲ್ಕಾರ್ ಸಾಹಿತಿಗಳು ಬೆಳಗಾವಿ ಇವರು ವಚನ ಸಾಹಿತ್ಯ ಚಳುವಳಿಯ ಕುರಿತು ವಿಷಯ ಮಂಡನೆ ಮಾಡಿದರು. ಸಮಾಜದಲ್ಲಿ ರೂಪಿತಗೊಂಡ ಜಾತಿ ವ್ಯವಸ್ಥೆಯ ಕುರಿತು ತಿಳುವಳಿಕೆ ಮತ್ತು ಅದನ್ನು ಮೀರುವ ಬಗೆ ಹೇಗೆ ಎಂಬುದನ್ನು ತಿಳಿಸುತ್ತಾ ಈ ವಿಚಾರ ಸಾಹಿತ್ಯ ಕೃತಿಗಳಲ್ಲಿ ಹೇಗೆ ವ್ಯಕ್ತವಾಗಿದೆ ಎಂಬುದನ್ನು ತಿಳಿಸಿದರು.

ಮೂರನೇ ಗೋಷ್ಠಿಯಲ್ಲಿ ಅಂಬಣ್ಣ ಆರೋಲಿಕರ್ ಹೋರಾಟದ ಹಾಡುಗಳ ಕುರಿತು ಮಾತನಾಡಿ, ಜನಪರರು ತಮ್ಮ ಕಷ್ಟಕಾರ್ಪಣ್ಯಗಳನ್ನು ಹೊರ ಹಾಕಲು ಹಾಡು ಎಂಬ ಆಪ್ತ ಮಾಧ್ಯಮವನ್ನು ಅಸ್ತ್ರವಾಗಿಸಿಕೊಂಡರು.

ಹಾಡು ಕೇವಲ ಅದು ಮನೋರಂಜನೆಗಾಗಿ ಅಲ್ಲ, ಅದು ಬದುಕಿಗೆ ಕಸುವನ್ನು ತುಂಬುವ ಶಕ್ತಿ ಇರುವ ಮಾಧ್ಯಮ. ದೊಡ್ಡ ದೊಡ್ಡ ಸಾಮಾಜಿಕ ಸಿದ್ಧಾಂತಗಳು ಚಿಂತನೆಗಳು ಜನಸಾಮಾನ್ಯ–ರಿಗೆ ಅರ್ಥೈಸಲು ಹಾಡೇ ಅಸ್ತ್ರ ಎಂದರು.

ಈ ಶಿಬಿರದಲ್ಲಿ ಕಲಬುರಗಿ ವಿಭಾಗದಿಂದ ಹಲವಾರು ವಿದ್ವಾಂಸರು ಸಂಶೋಧಕರು ಉಪನ್ಯಾಸಕರು ಭಾಗವಹಿಸಿದ್ದರು. ಕಾರ್ಯಕ್ರಮದ ಪ್ರಾಸ್ತಾವಿಕವಾಗಿ ತಾಲೂಕು ದಲಿತ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ. ಅರುಣಕುಮಾರ ಬೇರ್ಗಿ ಮಾತನಾಡಿದರು. ಅಧ್ಯಕ್ಷತೆ ಹೆಚ್.ಎಫ್. ಮಸ್ಕಿ ವಹಿಸಿಕೊಂಡಿದ್ದರು. ಶಿಬಿರದ ನಿರ್ದೇಶಕ ಹನುಮಂತಪ್ಪ ಚಂದಲಾಪೂರ, ಶಿಬಿರದ ಸಂಪನ್ಮೂಲ ವ್ಯಕ್ತಿಗಳಾದ ಚಂದ್ರಶೇಖರ ಗೊರೇಬಾಳ, ಡಿ. ಎಚ್.ಕಂಬಳಿ, ಹುಸೇನಪ್ಪ ಅಮರಾಪುರ, ಮಾಳಪ್ಪ ಬರ್ಶಿ, ತಿಮ್ಮಪ್ಪ ನಾಯಕ ಕಲಮಂಗಿ, ಮುಂತಾದವರು ವೇದಿಕೆ ಮೇಲಿದ್ದರು.

ಈ ಸಂದರ್ಭದಲ್ಲಿ: ರಾಮಣ್ಣ ಹಿರೇಬೇರ್ಗಿ, ಬಸವರಾಜ ಪಿ ನಾಯಕ್, ಶೋಭಾ ತುರಗಲ್, ಖಾದರ ಭಾಷಾ, ನಿರುಪಾದಿ ಗೋಮರ್ಸಿ, ದುರುಗಪ್ಪ ಗುಡದೂರು, ಮಗದಪ್ಪ, ಎಂ.ಶ್ರೀಶೈಲ, ವೀರೇಶ ಕನ್ನಾರಿ, ಮರಿಲಿಂಗಪ್ಪ, ಶರಣಪ್ಪ ಮಾನವಿ, ಮುಂತಾದವರು ಉಪಸ್ಥಿತರಿದ್ದರು. ಡಾ.ಮಲ್ಲಿಕಾರ್ಜುನ ಕಮತಗಿ ಕಾರ್ಯಕ್ರಮ ನಿರೂಪಿಸಿದರು, ಡಾ.ಶರೀಫ್ ಹಸಮಕಲ್ ಸ್ವಾಗತಿಸಿದರು, ಕು.ಜ್ಯೋತಿ ವಂದಿಸಿದರು.

ತುಂಗಭದ್ರ ಎಡದಂಡೆ ಕಾಲುವೆಗೆ ಡಿಸೆಂಬರ್ 31ರವರೆಗೆ ನೀರು ಹರಿಸಲು ಆಗ್ರಹ

ಅಕ್ಟೋಬರ್ 19ರ ಐ.ಸಿ.ಸಿ. ಸಭೆಯಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳದಿದ್ದರೆ ಉಗ್ರ ಹೋರಾಟದ ಎಚ್ಚರಿಕೆ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ರಾಜ್ಯದಲ್ಲಿ ಈ ವರ್ಷ ತೀವ್ರ ಬರಗಾಲದ ಪರಿಸ್ಥಿತಿ ನಿರ್ಮಾಣವಾಗಿದ್ದು, ಮಳೆಯ ಕೊರತೆಯಿಂದ ರೈತರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಒಂದೆಡೆ ಬೆಳೆಗಳು ಒಣಗುವ ಹಂತಕ್ಕೆ ತಲುಪಿದ್ದರೆ, ಮತ್ತೊಂದೆಡೆ ಸರ್ಕಾರ ಘೋಷಿಸಿರುವ ಬರ ಪರಿಹಾರದ ಹಣವೂ ರೈತರ ಕೈ ಸೇ–ರಿಲ್ಲ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಬೆಳೆ ಸಮೀಕ್ಷೆ ನಡೆಸಿ, ರೈತರಿಗೆ ?2,500 ಪರಿಹಾರ ನೀಡುವುದಾಗಿ ಘೋಷಿಸಿ ತಿಂಗಳು ಕಳೆದರೂ ಇದುವರೆಗೆ ಹಣ ಬಿಡುಗಡೆಯಾಗದಿರುವುದು ರೈತರ ಆಕ್ರೋಶಕ್ಕೆ ಕಾರಣವಾಗಿದೆ.

ಇಂತಹ ಸಂಕಷ್ಟದ ಸಂದರ್ಭದಲ್ಲಿ ತುಂಗಭದ್ರ ಎಡದಂಡೆ ಕಾಲುವೆ ವ್ಯಾಪ್ತಿಯ ಕಾರಟಗಿ, ಸಿಂಧನೂರು, ಮಾನವಿ ಮತ್ತು ಸಿರವಾರ ಭಾಗದ ರೈತರು ತುಂಗಭದ್ರಾ ನದಿಯ ನೀರನ್ನೇ ನಂಬಿಕೊಂಡು ಭತ್ತ ಮತ್ತು ಜೋಳದ ಬೆಳೆಗಳನ್ನು ಬೆಳೆದಿದ್ದಾರೆ. ಆದರೆ, ನಿರೀಕ್ಷಿತ ಮಳೆಯಾಗದ ಕಾರಣ ಕಾಲುವೆಯ ಕೆಳಭಾಗದ ಪ್ರದೇಶಗಳಲ್ಲಿ ಭತ್ತ ಮತ್ತು ಜೋಳದ ಬೆಳೆಗಳು ಒಣಗುವ ಹಂತಕ್ಕೆ ತಲುಪಿವೆ. ನೀರಿನ ಲಭ್ಯತೆಯಿದ್ದರೂ ರೈತರಿಗೆ ಆತಂಕ ಏಕೆ? ದಿನಾಂಕ 11–08–2026ರಂದು ನಡೆದ ಐ.ಸಿ.ಸಿ. ಸಭೆಯಲ್ಲಿ ತುಂಗಭದ್ರ ಜಲಾಶಯದಲ್ಲಿ 82 ಟಿ.ಎಂ.ಸಿ. ಅಡಿ ನೀರು ಸಂಗ್ರಹವಿದ್ದ ಹಿನ್ನೆಲೆಯಲ್ಲಿ ವಿವಿಧ ಕಾಲುವೆಗಳಿಗೆ ನೀರು ಹರಿಸುವ ಕುರಿತು ನಿರ್ಧಾರ ಕೈಗೊಳ್ಳಲಾಗಿತ್ತು.

ಅದರಂತೆ ತುಂಗಭದ್ರ ಎಡದಂಡೆ ಮುಖ್ಯ ಕಾಲುವೆಗೆ 4,100 ಕ್ಯೂಸೆಕ್ಸ್, ಬಲದಂಡೆ ಮೇಲ್ಮಟ್ಟದ ಕಾಲುವೆಗೆ 1,200 ಕ್ಯೂಸೆಕ್ಸ್, ಬಲದಂಡೆ ಕೆಳಮಟ್ಟದ ಕಾಲುವೆಗೆ 650 ಕ್ಯೂಸೆಕ್ಸ್, ರಾಯಬಸವಣ್ಣ ಕಾಲುವೆಗೆ 180 ಕ್ಯೂಸೆಕ್ಸ್, ಎಡದಂಡೆ ಮೇಲ್ಮಟ್ಟದ ಕಾಲುವೆಗೆ 25 ಕ್ಯೂಸೆಕ್ಸ್ ಹಾಗೂ ನದಿ ಪೂರಕವಾಗಿ 500 ಕ್ಯೂಸೆಕ್ಸ್ ನೀರು ಹರಿಸುವ ಯೋಜನೆಯೊಂದಿಗೆ 10–11–2026ರವರೆಗೆ ನೀರು ಒದಗಿಸುವ ನಿರ್ಧಾರ ಕೈಗೊಳ್ಳಲಾಗಿತ್ತು ಎಂದು ರೈತರು ತಿಳಿಸಿದ್ದಾರೆ. ಇದಲ್ಲದೆ, ಆಗಸ್ಟ್ 11ರ ನಂತರ ಸೆಪ್ಟೆಂಬರ್ 5ರವರೆಗೆ ಜಲಾಶಯದಲ್ಲಿ ಕನಿಷ್ಠ 28 ಟಿ.ಎಂ.ಸಿ. ಅಡಿ ನೀರು ಸಂಗ್ರಹವಾಗಿರುವುದಾಗಿ ರೈತರು ಉಲ್ಲೇಖಿಸಿದ್ದಾರೆ. ಲಭ್ಯವಿರುವ ನೀರಿನ ಸಂಗ್ರಹ, ಕಾಲುವೆಗಳಿಗೆ ನಿಗದಿಪಡಿಸಿದ ಪ್ರಮಾಣ ಹಾಗೂ ಮುಂದಿನ ನೀರಿನ ಅವಶ್ಯಕತೆಯನ್ನು ವೈಜ್ಞಾನಿಕವಾಗಿ ಪರಿಶೀಲಿಸಿದರೆ ಡಿಸೆಂಬರ್ 31ರವರೆಗೆ ನೀರು ಒದಗಿಸಲು ಸಾಧ್ಯವಿದೆಯೇ ಎಂಬುದನ್ನು ಅಧಿಕಾ–ರಿಗಳು ಸ್ಪಷ್ಟಪಡಿಸಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಆದರೆ, ನವೆಂಬರ್ 11ರ ನಂತರ ಯಾವುದೇ ಕಾರಣಕ್ಕೂ ಕಾಲುವೆಗಳಿಗೆ ನೀರು ಹ–ರಿಸುವ ಸಾಧ್ಯತೆಯಿಲ್ಲ ಎಂಬ ಮಾಹಿತಿ ಇಲಾಖೆಯ ಮೂಲಗಳಿಂದ ದೊರೆತಿದೆ ಎನ್ನಲಾಗಿದ್ದು, ಇದ–ರಿಂದ ರೈತರು ತೀವ್ರ ಆತಂಕಕ್ಕೆ ಒಳಗಾಗಿದ್ದಾರೆ.



ಎಕರೆಗೆ ?60 ಸಾವಿರಕ್ಕೂ ಅಧಿಕ ಖರ್ಚು ಭತ್ತ ಮತ್ತು ಜೋಳದ ಬೆಳೆಗಳಿಗಾಗಿ ರೈತರು ಪ್ರತಿ ಎಕರೆಗೆ ?60 ಸಾವಿರಕ್ಕೂ ಅಧಿಕ ಹಣ ಖರ್ಚು ಮಾಡಿದ್ದಾರೆ. ಬಿತ್ತನೆ, ನಾಟಿ, ಗೊಬ್ಬರ, ಔಷಧಿ, ಕೂಲಿ ಮತ್ತು ಇತರ ಕೃಷಿ ವೆಚ್ಚಗಳನ್ನು ಭರಿಸಿ ಬೆಳೆ ಬೆಳೆದಿರುವ ರೈತರಿಗೆ ನಿರ್ಣಾಯಕ ಹಂತದಲ್ಲಿ ನೀರು ಸ್ಥಗಿತಗೊಂಡರೆ ಸಂಪೂರ್ಣ ಬೆಳೆ ನಾಶವಾಗುವ ಅಪಾಯವಿದೆ.

ಇದರಿಂದ ರೈತರು ಸಾಲದ ಸುಳಿಗೆ ಸಿಲುಕಿ ಆರ್ಥಿಕವಾಗಿ ದಿವಾಳಿಯಾಗುವ ಪರಿಸ್ಥಿತಿ ನಿರ್ಮಾಣವಾಗಲಿದೆ. ರೈತರ ಬೆಳೆಗಳನ್ನು ಉಳಿಸುವುದು ಸರ್ಕಾರ ಮತ್ತು ನೀರಾವರಿ ಇಲಾಖೆಯ ಜವಾಬ್ದಾ–ರಿಯಾಗಿದೆ. ಜಲಾಶಯದ ನೀರಿನ ಸಂಗ್ರಹ, ಒಳಹ–ರಿವು, ವಿವಿಧ ಕಾಲುವೆಗಳಿಗೆ ಹರಿಸುತ್ತಿರುವ ನೀರಿನ ಪ್ರಮಾಣ ಹಾಗೂ ಕುಡಿಯುವ ನೀರಿನ ಅಗತ್ಯಗಳನ್ನು ಪರಿಗಣಿಸಿ, ರೈತರ ಹಿತದೃಷ್ಟಿಯಿಂದ ಸಮರ್ಪಕ ನೀರು ನಿರ್ವಹಣೆ ಮಾಡಬೇಕು ಎಂದು ಸಂಘಟನೆಯ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.

ಅಕ್ಟೋಬರ್ 19ರ ಐ.ಸಿ.ಸಿ. ಸಭೆಯಲ್ಲಿ ನಿರ್ಧಾರ ಕೈಗೊಳ್ಳಲು ಆಗ್ರಹ ಅಕ್ಟೋಬರ್ 19ರಂದು ನಡೆಯಲಿರುವ ಐ.ಸಿ.ಸಿ. ಸಭೆಯಲ್ಲಿ ತುಂಗಭದ್ರ ಎಡದಂಡೆ ಕಾಲುವೆ ವ್ಯಾಪ್ತಿಯ ರೈತರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ, ಲಭ್ಯವಿರುವ ನೀರಿನ ಸಂಪೂರ್ಣ ಲೆಕ್ಕಾಚಾರವನ್ನು ಸಾರ್ವಜನಿಕವಾಗಿ ಪ್ರಕಟಿಸಬೇಕು. ಸಾಧ್ಯತೆಯನ್ನು ತಾಂತ್ರಿಕವಾಗಿ ಪರಿಶೀಲಿಸಿ, ಡಿಸೆಂಬರ್ 31ರವರೆಗೆ ರೈತರ ಬೆಳೆಗಳಿಗೆ ಅಗತ್ಯವಿರುವ ನೀರನ್ನು ಒದಗಿಸುವ ಕುರಿತು ಸ್ಪಷ್ಟ ನಿರ್ಧಾರ ಕೈಗೊಳ್ಳಬೇಕು ಎಂದು ರೈತ ಮುಖಂಡರು ಆಗ್ರಹಿಸಿದ್ದಾರೆ. ಸಭೆಯಲ್ಲಿ ರೈತರ ಬೇಡಿಕೆಗೆ ಸ್ಪಂದಿಸದೆ, ನೀರು ಹ–ರಿಸುವ ಅವಧಿಯನ್ನು ವಿಸ್ತರಿಸುವ ಕುರಿತು ನಿರ್ಧಾರ ಕೈಗೊಳ್ಳದಿದ್ದರೆ ಕಾರಟಗಿ, ಸಿಂಧನೂರು, ಮಾನವಿ ಮತ್ತು ಸಿರವಾರ ಸೇರಿದಂತೆ ಎಡದಂಡೆ ಕಾಲುವೆ ವ್ಯಾಪ್ತಿಯ ರೈತರನ್ನು ಒಗ್ಗೂಡಿಸಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.

ರೈತರ ಬೆಳೆಗಳು ಉಳಿಯಬೇಕಾದರೆ ನೀರು ಅತ್ಯಗತ್ಯ. ಜಲಾಶಯದಲ್ಲಿರುವ ನೀರಿನ ಲಭ್ಯತೆ ಮತ್ತು ವಾಸ್ತವಿಕ ಅವಶ್ಯಕತೆಯನ್ನು ಆಧರಿಸಿ ಸರ್ಕಾರ ತಕ್ಷಣವೇ ರೈತರ ಪರವಾಗಿ ನಿರ್ಧಾರ ಕೈಗೊಳ್ಳಬೇಕು ಎಂಬುದು ರೈತ ಸಂಘಟನೆಯ ಪ್ರಮುಖ ಆಗ್ರಹವಾಗಿದೆ. ನಾಗರಾಜ ಬಿಂಗಿ ? ತಾಲೂಕು ಅಧ್ಯಕ್ಷರು , ನಿರುಪಾದೆಪ್ಪ ಅಡ್ಡಿ ? ತಾಲೂಕು ಕಾರ್ಯದರ್ಶಿ, ಬಸವರಾಜ ಗೋಡಿಹಾಳ ರಾಜ್ಯ ಪ್ರಧಾನ ಕಾರ್ಯದರ್ಶಿ, ರಮೇಶ ನಾಯಕ ಪುಲದಿನ್ನಿ ? ತಾಲೂಕು ಉಪಾಧ್ಯಕ್ಷ, ಶಿವಪ್ಪ ಬೆಳಗುರ್ಕಿ ? ತಾಲೂಕು ಕಾರ್ಯದರ್ಶಿ, ಅಯ್ಯಪ್ಪ ಬನ್ನಿಗನೂರ ? ತಾಲೂಕು ಪ್ರಧಾನ ಕಾರ್ಯದರ್ಶಿ, ಯಮನಪ್ಪ ಪಗಡದಿನ್ನಿ ? ತಾಲೂಕು ಉಪಾಧ್ಯಕ್ಷರು, ರವಿ ಬಸಾಪೂರ ? ಇ.ಜೆ. ನಗರ ಘಟಕದ ಅಧ್ಯಕ್ಷರು, ಬಸವರಾಜ ವಿಶ್ವಕರ್ಮ ? ನಗರ ಘಟಕದ ಉಪಾಧ್ಯಕ್ಷರು , ಂಉಜಿಖ ರೈತ ಸಂಘಟನೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು

ನೇಮಕಾತಿ ಪ್ರಕಟಣೆ

ಬಿಜಿಸಿಎಲ್ ನೇಮಕಾತಿ 2026 – 29 ಅಸಿಸ್ಟೆಂಟ್ ಅಸೋಸಿಯೇಟ್, ಅಸೋಸಿಯೇಟ್ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಅಕ್ಟೋಬರ್ 12, 2026

ಬಿಜಿಸಿಎಲ್ ನೇಮಕಾತಿ 2026: 29 ಅಸಿಸ್ಟೆಂಟ್ ಅಸೋಸಿಯೇಟ್, ಅಸೋಸಿಯೇಟ್ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಬೆಂಗಾಲ್ ಗ್ಯಾಸ್ ಕಂಪನಿ ಲಿಮಿಟೆಡ್ ಅಕ್ಟೋಬರ್ 2026 ರ ಬಿಜಿಸಿಎಲ್ ಅಧಿಕೃತ ಅಧಿಸೂಚನೆಯ ಮೂಲಕ ಅಸಿಸ್ಟೆಂಟ್ ಅಸೋಸಿಯೇಟ್, ಅಸೋಸಿಯೇಟ್ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಅಖಿಲ ಭಾರತ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 27–ಅಕ್ಟೋ–2026 ರಂದು ಅಥವಾ ಅದಕ್ಕೂ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು ಅಧಿಕೃತ ವೆಬ್‌ಸೈಟ್: bgcl.co.in

ಕಂಪ್ಲಿಯಲ್ಲಿ ಶ್ರೀ ನಲ್ಲಮ್ಮ ದೇವಿಯ ಪಂಚವಾರ್ಷಿಕೋತ್ಸವ: ವೈಭವದ ಗಂಗೆಸ್ಥಳ ಮೆರವಣಿಗೆ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಪಟ್ಟಣದ 9ನೇ ವಾರ್ಡಿನ ಶ್ರೀ ನಲ್ಲಮ್ಮ ದೇವಿ ಸೇವಾ ಟ್ರಸ್ಟ್ ವತಿಯಿಂದ ಶ್ರೀ ನಲ್ಲಮ್ಮ ದೇವಿಯ ಪಂಚವಾರ್ಷಿಕೋತ್ಸವ ಹಾಗೂ ಗಂಗೆಸ್ಥಳ ಮೆರವಣಿಗೆಯು ಶುಕ್ರವಾರ ಅತ್ಯಂತ ಶ್ರದ್ಧಾಭಕ್ತಿ ಮತ್ತು ವಿಜೃಂಭಣೆಯಿಂದ ಜರುಗಿತು. ಹಬ್ಬದ ಅಂಗವಾಗಿ ಕಂಪ್ಲಿ ಕೋಟೆಯ ತುಂಗಭದ್ರಾ ನದಿ ತಟದಲ್ಲಿ ದೇವಿಗೆ ಸಾಂಪ್ರದಾಯಿಕ ಗಂಗೆಪೂಜೆ ಸಲ್ಲಿಸಲಾಯಿತು.

ನಂತರ ವೆಂಕಟರಮಣ ದೇವಸ್ಥಾನದಿಂದ ಆರಂಭಗೊಂಡ ಭವ್ಯ ಮೆರವಣಿಗೆಯು ಗಂಡುಗಲಿ ಕುಮಾರರಾಮನ ಕೋಟೆ ಮುಖಾಂತರ ಪಟ್ಟಣದ ನಡುವಲ ಮಸೀದಿ, ಡಾ. ರಾಜ್‌ಕುಮಾರ್ ಮುಖ್ಯ ರಸ್ತೆ ಹಾಗೂ ಪ್ರಮುಖ ಬೀದಿಗಳಲ್ಲಿ ಸಂಚರಿಸಿ ನಲ್ಲಮ್ಮ ದೇವಸ್ಥಾನದಲ್ಲಿ ಸಂಪನ್ನಗೊಂಡಿತು. ಮೆರವಣಿಗೆಯುದ್ದಕ್ಕೂ ಭಕ್ತರು ಹೊತ್ತಿದ್ದ ಕುಂಭಗಳು ಹಾಗೂ ಸಾಂಪ್ರದಾಯಿಕ ಡೊಳ್ಳು ಕುಣಿತ ಸೇರಿದಂತೆ ನಾನಾ ಕಲಾಪ್ರಕಾರಗಳು ಸಾರ್ವಜನಿಕರ ಗಮನ ಸೆಳೆದವು.



ದೇವಸ್ಥಾನ ತಲುಪಿದ ಬಳಿಕ ವಿಶೇಷ ಪೂಜಾ ಕೈಂಕರ್ಯಗಳು ನೆರವೇ–ರಿದವು. ನಂತರ ಸಾರ್ವಜನಿಕರಿಗೆ ಅನ್ನಸಂತಾರ್ಪಣೆ ವ್ಯವಸ್ಥೆ ಮಾಡಲಾಗಿತ್ತು. ಕಾರ್ಯಕ್ರಮದಲ್ಲಿ ನಲ್ಲಮ್ಮ ದೇವಿ ಸೇವಾ ಟ್ರಸ್ಟ್ ಅಧ್ಯಕ್ಷ ಕೆ. ವೆಂಕಟೇಶ್, ಗೌರವಾಧ್ಯಕ್ಷ ಓಬಳೇಶ, ಪ್ರಮುಖರಾದ ಎಸ್. ವೆಂಕಟೇಶ, ರವಿ, ಶೇಷಪ್ಪ, ಶ್ರೀನಿವಾಸ, ರಂಜಿತ, ಸಂಗಪ್ಪ, ಮಲ್ಲಯ್ಯ ಸೇರಿದಂತೆ ಊರಿನ ನಾಯಕರು, ಅಪಾರ ಸಂಖ್ಯೆಯ ಮಹಿಳೆಯರು, ಯುವಕರು ಮತ್ತು ಮಕ್ಕಳು ಪಾಲ್ಗೊಂಡಿದ್ದರು.

ಕಾಳಿಕಾ ದೇವಸ್ಥಾನದಲ್ಲಿ ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮ

ನೈಜ್ಯ ದೆಸೆ ನ್ಯೂಸ್

ಸಿರವಾರ: ಪಟ್ಟಣದ ಶ್ರೀರಾಮ ನಗರದಲ್ಲಿರುವ ಶ್ರೀ ಕಾಳಿಕಾ ದೇವಸ್ಥಾನದಲ್ಲಿ ನವರಾತ್ರಿ ಹಬ್ಬದ ಅಂಗವಾಗಿ ಮುತ್ತೈದೆಯರ ಉಡಿ ತುಂಬುವ ಕಾರ್ಯಕ್ರಮ ಭಕ್ತಿ ಸಂಭ್ರಮದಿಂದ ನೆರವೇರಿತು.



ನವರಾತ್ರಿ ಪ್ರಯುಕ್ತ ಬೆಳಿಗ್ಗೆಯಿಂದಲೇ ದೇವಿಗೆ ವಿಶೇಷ ಅಲಂಕಾರ, ಅಭಿಷೇಕ, ಕುಂಕುಮಾರ್ಚನೆ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕಾರ್ಯಕ್ರಮಗಳು ಜರುಗಿದವು. ಪೂಜಾ ಕಾರ್ಯಕ್ರಮಗಳ ಬಳಿಕ ಹಮ್ಮಿಕೊಂಡಿದ್ದ ಉಡಿ ತುಂಬುವ ಕಾರ್ಯಕ್ರಮದಲ್ಲಿ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳಿಂದ ಆಗಮಿಸಿದ್ದ ನೂರಾರು ಮಹಿಳೆಯರು ಭಾಗವಹಿಸಿ ದೇವಿಯ ದರ್ಶನ ಪಡೆದು ಪುನೀತರಾದರು. ದೇವಸ್ಥಾನದ ಆವರಣದಲ್ಲಿ ಮಹಿಳೆಯರ ದಂಡೇ ನೆರೆದಿದ್ದು, ಇಡೀ ಪರಿಸರದಲ್ಲಿ ನವರಾತ್ರಿ ಸಂಭ್ರಮ ಮನೆ ಮಾಡಿತ್ತು. ಈ ಸಂದರ್ಭದಲ್ಲಿ ದೇವಸ್ಥಾನ ಸಮಿತಿ ಪದಾಧಿಕಾರಿಗಳು, ಅರ್ಚಕರು ಹಾಗೂ ಶಾಂತಮ್ಮ ಕುಂಬಾರ, ಪರಿಮಳಾ ವಿಶ್ವಕರ್ಮ, ಶಶಿಕಲಾ ಪತ್ತಾರ್, ಲತಾ ಪತ್ತಾರ್, ಅನಿತಾ ಕುಂಬಾರ, ವೀರಭದ್ರಮ್ಮ ಕುಂಬಾರ , ಶ್ರೀದೇವಿ ಕುಂಬಾರ, ತಾಯಮ್ಮ ಕುಂಬಾರ, ಲಕ್ಷ್ಮಿ , ಅನುಷಾ ವಿಶ್ವಕರ್ಮ ಸೇರಿದಂತೆ ಇತರರು ಇದ್ದರು.

ವಿದ್ಯಾರ್ಥಿಗಳ ಶೈಕ್ಷಣಿಕ ಹಕ್ಕುಗಳ ರಕ್ಷಣೆಗೆ ದಲಿತ ವಿದ್ಯಾರ್ಥಿ ಪರಿಷತ್ ಆಗ್ರಹ

ಬಾಕಿ ಫಲಿತಾಂಶ ಪ್ರಕಟಣೆ, ಅಂಕಪಟ್ಟಿ ವಿತರಣೆ ಹಾಗೂ ಘಟಿಕೋತ್ಸವ ಆಯೋಜನೆಗೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

ರಾಯಚೂರು: ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಸಂಬಂಧಿಸಿದ ವಿವಿಧ ಸಮಸ್ಯೆಗಳನ್ನು ಪರಿಹರಿಸುವಂತೆ ಆಗ್ರಹಿಸಿ, ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ, ರಾಯಚೂರು ವತಿಯಿಂದ ಶ್ರೀ ಮಹರ್ಷಿ ವಾಲ್ಮೀಕಿ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಶ್ರೀ ಶಿವಾನಂದ ಕೆಳಗಿನಮನೆ ಹಾಗೂ ಮೌಲ್ಯಮಾಪನ ಕುಲಸಚಿವರಾದ ಶ್ರೀ ಜ್ಯೋತಿ ದಮ್ಮ ಪ್ರಕಾಶ್ ಅವರಿಗೆ ಮನವಿ ಸಲ್ಲಿಸಲಾಯಿತು.

ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತರಲಾಯಿತು. ಹಲವು ವಿದ್ಯಾರ್ಥಿಗಳು ತಮ್ಮ ಪರೀಕ್ಷಾ ಫಲಿತಾಂಶ, ಅಂಕಪಟ್ಟಿ ಹಾಗೂ ಪದವಿ ಪ್ರಮಾಣಪತ್ರಗಳಿಗಾಗಿ ಕಾಯುತ್ತಿರುವುದರಿಂದ ಅವರ ಮುಂದಿನ ಶೈಕ್ಷಣಿಕ ಪ್ರಗತಿ ಮತ್ತು ಉದ್ಯೋಗಾವಕಾಶಗಳಿಗೆ ತೊಂದರೆಯಾಗುವ ಸಾಧ್ಯತೆಯಿದೆ. ಆದ್ದ–ರಿಂದ ವಿಶ್ವವಿದ್ಯಾಲಯದ ಆಡಳಿತ ಮಂಡಳಿ ಈ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಗಣಿಸಿ ತ್ವರಿತ ಕ್ರಮ ಕೈಗೊಳ್ಳಬೇಕು ಎಂದು ಪರಿಷತ್ ಒತ್ತಾಯಿಸಿತು.

ಮನವಿಯ ಪ್ರಮುಖ ಬೇಡಿಕೆಗಳು:

1. ವಿಶ್ವವಿದ್ಯಾಲಯದ ವ್ಯಾಪ್ತಿಯ ಎಲ್ಲಾ ಪದವಿ ಹಾಗೂ ಸ್ನಾತಕೋತ್ತರ ಪದವಿ ವಿಭಾಗಗಳ ಬಾಕಿ ಇರುವ ಪರೀಕ್ಷಾ ಫಲಿತಾಂಶಗಳನ್ನು ಕೂಡಲೇ ಪ್ರಕಟಿಸಬೇಕು.
2. ಬಾಕಿ ಉಳಿದಿರುವ ಎಲ್ಲಾ ವಿಭಾಗಗಳ ಅಂಕಪಟ್ಟಿಗಳನ್ನು ತಕ್ಷಣ ಮುದ್ರಿಸಿ ವಿದ್ಯಾರ್ಥಿಗಳಿಗೆ ವಿತರಿಸಬೇಕು.
3. ಅರ್ಹ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರಗಳನ್ನು ವಿತರಿಸಲು ಘಟಿಕೋತ್ಸವ ಕಾರ್ಯಕ್ರಮವನ್ನು ಶೀಘ್ರವಾಗಿ ಆಯೋಜಿಸಬೇಕು.
4. ಫಲಿತಾಂಶ ಪ್ರಕಟಣೆ ಮತ್ತು ಅಂಕಪಟ್ಟಿ ವಿತರಣೆಯಲ್ಲಿನ ವಿಳಂಬಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಬೇಕು.
5. ವಿದ್ಯಾರ್ಥಿಗಳ ಶೈಕ್ಷಣಿಕ ಸಮಸ್ಯೆಗಳಿಗೆ ಸ್ಪಂದಿಸಲು ಪರಿಣಾಮಕಾರಿ ಕುಂದುಕೊರತೆ ಪರಿಹಾರ ವ್ಯವಸ್ಥೆಯನ್ನು ರೂಪಿಸಬೇಕು.
6. ವಿದ್ಯಾರ್ಥಿಗಳ ಮುಂದಿನ ಶಿಕ್ಷಣ, ಸ್ಪರ್ಧಾತ್ಮಕ ಪರೀಕ್ಷೆಗಳು ಹಾಗೂ ಉದ್ಯೋಗಾವಕಾಶಗಳಿಗೆ ಅಡ್ಡಿಯಾಗದಂತೆ ಅಗತ್ಯ ದಾಖಲೆಗಳನ್ನು ಸಕಾಲದಲ್ಲಿ ಒದಗಿಸಬೇಕು.
7. ವಿಶ್ವವಿದ್ಯಾಲಯದ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಕಾರ್ಯವೈಖರಿಯಲ್ಲಿ ಪಾರದರ್ಶಕತೆ, ಹೊಣೆಗಾ–ರಿಕೆ ಹಾಗೂ ವೇಗವನ್ನು ಹೆಚ್ಚಿಸಬೇಕು.



ವಿದ್ಯಾರ್ಥಿಗಳು ವರ್ಷಗಳ ಕಾಲ ಪರಿಶ್ರಮಪಟ್ಟು ಶಿಕ್ಷಣ ಪಡೆಯುತ್ತಾರೆ. ಆದ–ರೆ ಪರೀಕ್ಷಾ ಫಲಿತಾಂಶ, ಅಂಕಪಟ್ಟಿ ಅಥ–ವಾ ಪದವಿ ಪ್ರಮಾಣಪತ್ರಗಳು ವಿಳಂಬವಾದರೆ ಅವರ ಮುಂದಿನ ವಿದ್ಯಾಭ್ಯಾಸ, ಉನ್ನತ ಶಿಕ್ಷಣ ಪ್ರವೇಶ ಮತ್ತು ಉದ್ಯೋಗಕ್ಕೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಗಳಲ್ಲಿ ಅನಗತ್ಯ ಸಮಸ್ಯೆಗಳು ಎದುರಾಗುತ್ತವೆ. ವಿದ್ಯಾರ್ಥಿಗಳ ಭವಿಷ್ಯವನ್ನು ಗಮನದಲ್ಲಿಟ್ಟುಕೊಂಡು ವಿಶ್ವವಿದ್ಯಾಲಯವು ಇಂತಹ ವಿಳಂಬಗಳನ್ನು ತಪ್ಪಿಸಬೇಕು ಎಂಬುದು ಪರಿಷತ್‌ನ ಆಗ್ರಹವಾಗಿದೆ. ವಿಶ್ವವಿದ್ಯಾಲಯವು ಕೇವಲ ಪದವಿಗಳನ್ನು ನೀಡುವ ಸಂಸ್ಥೆಯಾಗಿರದೆ, ವಿದ್ಯಾರ್ಥಿಗಳ ಭವಿಷ್ಯ ರೂಪಿಸುವ ಪ್ರಮುಖ ಶೈಕ್ಷಣಿಕ ಕೇಂದ್ರವಾಗಿದೆ. ಹೀಗಾಗಿ ವಿದ್ಯಾರ್ಥಿಗಳ ಸಮಸ್ಯೆಗಳಿಗೆ ಸ್ಪಂದಿಸುವುದು, ಅವರ ಹಕ್ಕುಗಳನ್ನು ರಕ್ಷಿಸುವುದು ಮತ್ತು ಗುಣಮಟ್ಟದ ಶೈಕ್ಷಣಿಕ ವಾತಾವರಣವನ್ನು ನಿರ್ಮಿಸುವುದು ವಿಶ್ವವಿದ್ಯಾಲಯದ ಜವಾಬ್ದಾ–ರಿಯಾಗಿದೆ ಎಂದು ಪರಿಷತ್ ಅಭಿಪ್ರಾಯಪಟ್ಟಿತು.

ವಿದ್ಯಾರ್ಥಿಗಳ ಶೈಕ್ಷಣಿಕ ಹಿತಾಸಕ್ತಿಗೆ ಧಕ್ಕೆಯಾಗದಂತೆ ಎಲ್ಲಾ ಬಾಕಿ ಕೆಲಸಗಳನ್ನು ತ್ವ–ರಿತವಾಗಿ ಪೂರ್ಣಗೊಳಿಸಿ, ನ್ಯಾಯಸಮ್ಮತ ಹಾಗೂ ವಿದ್ಯಾರ್ಥಿಸ್ನೇಹಿ ಆಡಳಿತವನ್ನು ಜಾರಿಗೆ ತರಬೇಕು ಎಂದು ದಲಿತ ವಿದ್ಯಾರ್ಥಿ ಪರಿಷತ್ ಜಿಲ್ಲಾ ಸಮಿತಿ, ರಾಯಚೂರು ವತಿಯಿಂದ ಒತ್ತಾಯಿಸಲಾಯಿತು. ವಿದ್ಯಾರ್ಥಿಗಳ ಭವಿಷ್ಯವೇ ನಾಡಿನ ಭವಿಷ್ಯ. ಅವರ ಶೈಕ್ಷಣಿಕ ಹಕ್ಕುಗಳ ರಕ್ಷಣೆ ಎಲ್ಲರ ಜವಾಬ್ದಾರಿ.

ಪ್ರಜಾಪ್ರಭುತ್ವ ಮೌಲ್ಯ, ಸಂವಿಧಾನದ ಆಶಯ ಅರಿಯಿರಿ: ವಿದ್ಯಾರ್ಥಿಗಳಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಕಿವಿಮಾತು

ನೈಜ್ಯ ದೆಸೆ ನ್ಯೂಸ್

ತಾಂಡವಪುರ: ನಂಜನಗೂಡು ವಿಧಾನಸಭಾ ಕ್ಷೇತ್ರಕ್ಕೆ ಸೇರುವ ನಂಜನಗೂಡಿನ ಸಿಟಿಜನ್ ಶಾಲೆಯಲ್ಲಿ ಅಂತರರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ಅಂಗವಾಗಿ ನಂಜನಗೂಡು ತಾಲ್ಲೂಕು ಆಡಳಿತ ಹಾಗೂಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ 'ಯುವ ಸಂಸತ್ತು' ಕಾರ್ಯಕ್ರಮದಲ್ಲಿ ನಂಜನಗೂಡು ಕ್ಷೇತ್ರದ ಶಾಸಕರಾದ ದರ್ಶನ್ ಧ್ರುವನಾರಾಯಣ್ ಪಾಲ್ಗೊಂಡು. ಡಾ. ಬಿಆರ್ ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಕಾರ್ಯಕ್ರಮ ಉದ್ಘಾಟಿಸಿ ವಿದ್ಯಾರ್ಥಿಗಳೊಂದಿಗೆ ಪ್ರಜಾಪ್ರಭುತ್ವದ ಮೌಲ್ಯಗಳು,

ಸಂವಿಧಾನದ ಆಶಯಗಳು ಹಾಗೂ ಯುವಜನರ ಜವಾಬ್ದಾ–ರಿಗಳ ಕುರಿತು ಅರ್ಥಪೂರ್ಣವಾಗಿ ಚರ್ಚಿಸಿ ವಿದ್ಯಾರ್ಥಿಗಳಿಗೆ ಈ ಕು–ರಿತು ಅರಿವು ಮೂಡಿಸಿದರು ಯುವಜನರು ಕೇವಲ ಭವಿಷ್ಯದ ನಾಯಕರು ಮಾತ್ರವಲ್ಲ, ಇಂದಿನ ಪ್ರಜಾಪ್ರಭುತ್ವದ ಸಕ್ರಿಯ ಪಾಲುದಾರರೂ ಹೌದು. ತಮ್ಮ ಹಕ್ಕುಗಳನ್ನು ಅರಿತು, ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸಿ, ಸಮಾಜದ ಒಳಿತಿಗಾಗಿ ಧ್ವನಿ ಎತ್ತುವುದು ಪ್ರತಿಯೊಬ್ಬ ಯುವಕರ ಜವಾಬ್ದಾ–ರಿಯಾಗಿದೆ. ಎಂದ ಶಾಸಕರು ಪ್ರಶ್ನಿಸುವ ಮನೋಭಾವ, ವಿಚಾರಪೂರ್ಣ ಚರ್ಚೆ ಮತ್ತು ಸಂವಿಧಾನದ ಮೌಲ್ಯಗಳ ಮೇಲಿನ ನಂಬಿಕೆಯೇ ಬಲಿಷ್ಠ ಪ್ರಜಾಪ್ರಭುತ್ವದ ಅಡಿಪಾಯ. ಎಂದು ಶಾಸಕರು ಹೇಳಿದರು ಯುವಜನರಲ್ಲಿ ಪ್ರಜಾಪ್ರಭುತ್ವದ ಅರಿವು ಮೂಡಿಸುವುದು, ಸಂವಿಧಾನದ ಮೌಲ್ಯಗಳನ್ನು ಗೌರವಿಸುವ ಮನೋಭಾವ ಬೆಳೆಸುವುದು ಹಾಗೂ ಜವಾಬ್ದಾರಿಯುತ ನಾಗರಿಕರಾಗಿ ರೂಪುಗೊಳ್ಳಲು ಪ್ರೇರೇಪಿಸುವಲ್ಲಿ ಇಂತಹ ಕಾರ್ಯಕ್ರಮಗಳು ಮಹತ್ವದ ಪಾತ್ರ ವಹಿಸುತ್ತವೆ.



ಪ್ರತಿಯೊಬ್ಬ ಯುವಕ–ಯುವತಿಯೂ ಪ್ರಜಾಪ್ರಭುತ್ವದ ನಿರ್ಮಾಣದಲ್ಲಿ ತನ್ನ ಪಾತ್ರವನ್ನು ಅರಿತು, ಸಕ್ರಿಯವಾಗಿ ಭಾಗವಹಿಸಿದಾಗ ಮಾತ್ರ ನಮ್ಮ ದೇಶದ ಪ್ರಜಾಪ್ರಭುತ್ವ ಇನ್ನಷ್ಟು ಬಲಿಷ್ಠವಾಗುತ್ತದೆ ಎಂದು ದರ್ಶನ್ ಧ್ರುವನಾರಾಯಣ್ ರವರು ಹೇಳಿದರು ಈ ಕಾರ್ಯಕ್ರಮದಲ್ಲಿ ಮಾಜಿ ಶಾಸಕರಾದ ಕಳಲೆ ಕೇಶವಮೂರ್ತಿ ರವರು, ತಹಸೀಲ್ದಾರ್ ಸ್ಮಿತಾ ರಾಮು ರವರು, ಃಇಔ ಮಹೇಶ್ ರವರು, ಗಾಯತ್ರಿ ಮೋಹನ್ ರವರು ಸೇ–ರಿದಂತೆ ಹಲವರು ಹಾಜರಿದ್ದರು.

ಪ್ರತಿಭಟನಾನಿರತ ರೈತರ ಜೊತೆ ಇಂದು ಸಿಎಂ ಡಿಕೆಶಿ ಚರ್ಚೆ

ನೈಜ್ಯ ದೆಸೆ ನ್ಯೂಸ್

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಪ್ರತಿಭಟನೆ ನಡೆಸುತ್ತಿರುವ ರೈತರನ್ನು ಇಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಭೇಟಿ ಮಾಡಿ ಚರ್ಚೆ ನಡೆಸಲಿದ್ದಾರೆ.ಇಂದು ಸಂಜೆ ವಿಶೇಷ ವಿಮಾನದಲ್ಲಿ ಬೆಳಗಾವಿಗೆ ತಲುಪಲಿರುವ ಡಿ.ಕೆ.ಶಿವಕುಮಾರ್ ಅಲ್ಲಿಂದ ಕಿತ್ತೂರಿಗೆ ತೆರಳಿ ಅಲ್ಲಿ ರೈತರ ಜೊತೆ ಸಮಾಲೋಚನೆ ನಡೆಸಲಿದ್ದಾರೆ.ನಕ್ಷೆಗಳನ್ನು ನೋಡಿ

ಪ್ರತಿ ಟನ್ ಕಬ್ಬಿಗೆ 6000 ರೂ. ಎಫ್‌ಆರ್‌ಪಿ ದರ ನಿಗದಿ ಮಾಡಬೇಕು. ಪ್ರತಿ ಕೆ.ಜಿ. ಸಕ್ಕರೆಗೆ 60 ರೂ. ಎಂಆರ್‌ಪಿ ನಿಗದಿ ಮಾಡಬೇಕು. ರಾಜ್ಯದಲ್ಲಿ ಉತ್ಪಾದನೆಯಾಗುವ ಎಥೆನಾಲ್ ಅನ್ನು ಪೂರ್ಣ ಪ್ರಮಾಣದಲ್ಲಿ ಕೇಂದ್ರ ಸರ್ಕಾರ ನೇರವಾಗಿ ಖರೀದಿಸಬೇಕು ಎಂಬ ಪ್ರಮುಖ ಬೇಡಿಕೆಗಳೊಂದಿಗೆ ಕಳೆದ ಸೋಮವಾರ ಮಧ್ಯರಾತ್ರಿಯಿಂದ ಹೆದ್ದಾರಿ ತಡೆ ಆರಂಭಿಸಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಬೆಳಗಾವಿ, ಬಾಗಲಕೋಟೆ, ಹಾವೇರಿ, ರಾಯಚೂರು, ಹುಬ್ಬಳ್ಳಿ–ಧಾರವಾಡ, ಕಲಬುರಗಿ ಸೇರಿದಂತೆ ವಿವಿಧ ಕಡೆಗಳಲ್ಲಿ ರೈತರು ಪ್ರತಿಭಟನೆ ನಡೆಸುತ್ತಿದ್ದಾರೆ. ಕೇಂದ್ರ ಸರ್ಕಾರ ಕಬ್ಬು ಬೆಳೆಗೆ ವೈಜ್ಞಾನಿಕ ಬೆಲೆ ನಿಗದಿಗಾಗಿ ಅಧ್ಯಯನಕ್ಕಾಗಿ ಪ್ರತ್ಯೇಕ ಸಮಿತಿ ರಚಿಸಿದೆ. ಆದರೆ ರೈತರು ಪ್ರತಿಭಟನೆಯಿಂದ ಹಿಂದೆ ಸರಿದಿಲ್ಲ.



ಬೇಡಿಕೆ ಈಡೇರುವವರೆಗೂ ಪ್ರತಿಭಟನೆ ನಡೆಸುವುದಾಗಿ ಪಟ್ಟು ಹಿಡಿದಿದ್ದಾರೆ.ಹೆದ್ದಾರಿ ತಡೆ ಜೊತೆಗೆ ರೈತರ ಪಾದಯಾತ್ರೆ ಕೂಡ ಆರಂಭವಾಗಿದೆ. ಹುಕ್ಕೇರಿಯ ಹತ್ತರಗಿ ಟೋಲ್‌ನಿಂದ ಆರಂಭವಾಗಿರುವ ಪಾದಯಾತ್ರೆ ಇಂದು ಕಿತ್ತೂರು ತಲುಪಿದೆ. ಪ್ರತಿಭಟನೆಯಲ್ಲಿ ಮಾಜಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಕೂಡ ಭಾಗಿಯಾಗಿದ್ದಾರೆ. ಬಹುತೇಕ ಬೇಡಿಕೆಗಳು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ್ದಾಗಿವೆ. ರಾಜ್ಯ ಸರ್ಕಾರ ಕಬ್ಬು ಹಾಗೂ ಅದರ ಉತ್ಪನ್ನಗಳಿಂದ ವಸೂಲಿ ಮಾಡುವ ತೆರಿಗೆಯಲ್ಲಿ ಪ್ರತಿ ಟನ್‌ಗೆ 1 ಸಾವಿರ ರೂ. ಬೆಂಬಲ ಬೆಲೆ ನೀಡಬೇಕು ಎಂದು ರೈತರು ಆಗ್ರಹಿಸಿದ್ದಾರೆ.

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸರ್ಕಾರ ರೈತರ ಬೇಡಿಕೆಗಳ ವಿಚಾರವಾಗಿ ಸಕಾರಾತಕವಾಗಿ ವಿವಿಧ ಹಂತಗಳಲ್ಲಿ ಚರ್ಚೆಗಳು ನಡೆಯುತ್ತಿವೆ. ಹೀಗಾಗಿ ಯಾರೂ ತಾಳೆ ಕಳೆದುಕೊಳ್ಳಬಾರದು, ಸಹನೆಯಿಂದಿರಬೇಕು ಎಂದು ಡಿ.ಕೆ.ಶಿವಕುಮಾರ್ ಕರೆ ನೀಡಿದರು. ಇಂದು ಖುದ್ದು ರೈತರನ್ನು ಭೇಟಿ ಮಾಡಿ ಚರ್ಚೆ ನಡೆಸುತ್ತಿದ್ದಾರೆ.

ಜಾಲಹಳ್ಳಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸುವ ಮನವಿಗೆ ಜಿಲ್ಲಾಡಳಿತ ಸ್ಪಂದನೆ

ಮನವಿ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ತಾಲೂಕು ಪಂಚಾಯಿತಿ ಇಒಗೆ ಸೂಚನೆ: ಬುಡ್ಡಪ್ಪ ಕಾವಲಿ

ನೈಜ್ಯ ದೆಸೆ ನ್ಯೂಸ್

ದೇವದುರ್ಗ: ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವ ಜಾಲಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಬೇಕೆಂಬ ಬಹುದಿನಗಳ ಬೇಡಿಕೆಗೆ ಜಿಲ್ಲಾಡಳಿತ ಸ್ಪಂದಿಸಿದೆ. ಈ ಸಂಬಂಧ ಸಲ್ಲಿಸಲಾದ ಮನವಿಯನ್ನು ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳುವಂತೆ ದೇವದುರ್ಗ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾ–ರಿಗಳಿಗೆ ಜಿಲ್ಲಾಧಿಕಾರಿ ಕಚೇರಿಯಿಂದ ಪತ್ರದ ಮೂಲಕ ಸೂಚನೆ ನೀಡಲಾಗಿದೆ.



ಜಾಲಹಳ್ಳಿ ಗ್ರಾಮ ಪಂಚಾಯಿತಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸುವಂತೆ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಹಾಗೂ ಪುರಸಭೆ ಹೋರಾಟಗಾರ ಬುಡ್ಡಪ್ಪ ಕಾವಲಿ ಅವರು ಹೊಸೂರು ಸಿದ್ದಾಪುರ ಗ್ರಾಮದಲ್ಲಿ ನಡೆದ ಪ್ರಜಾ ಸೇವಾ ಕಾರ್ಯಕ್ರಮದಲ್ಲಿ ಮನವಿ ಸಲ್ಲಿಸಿದ್ದರು. ಈ ಮನವಿಗೆ ಸಂಬಂಧಿಸಿದಂತೆ ರಾಯಚೂರು ಜಿಲ್ಲಾಧಿಕಾರಿ ಕಚೇ–ರಿಯು 2026ರ ಅಕ್ಟೋಬರ್ 3ರಂದು ದೇವದುರ್ಗ ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಪತ್ರ ಬರೆದಿದೆ.

ಮನವಿಯಲ್ಲಿನ ಅಂಶಗಳು ಹಾಗೂ ವಾಸ್ತವಾಂಶಗಳನ್ನು ಪರಿಶೀಲಿಸಿ ನಿಯಮಾನುಸಾರ ಸೂಕ್ತ ಕ್ರಮ ಕೈಗೊಳ್ಳಬೇಕು. ಕೈಗೊಂಡ ಕ್ರಮದ ಕು–ರಿತು ಅರ್ಜಿದಾರರಿಗೆ ನೇರವಾಗಿ ಮಾಹಿತಿ ನೀಡುವುದರ ಜತೆಗೆ, ಅದರ ವಿವರಗಳನ್ನು ಜಿಲ್ಲಾಧಿಕಾರಿ ಕಚೇರಿಗೂ ಸಲ್ಲಿಸಬೇಕು ಎಂದು ಪತ್ರದಲ್ಲಿ ಸೂಚಿಸಲಾಗಿದೆ. ಈ ಕುರಿತು ಬುಡ್ಡಪ್ಪ ಕಾವಲಿ ಅವರು ಪತ್ರಕರ್ತರ ಗಮನಕ್ಕೆ ತಂದಿದ್ದಾರೆ.

ಅಂತಿಮ ಅನುಮೋದನೆಗೆ ಇನ್ನೂ ಬಾಕಿ

ಜಿಲ್ಲಾಧಿಕಾರಿ ಕಚೇರಿಯಿಂದ ಬಂದಿರುವ ಪತ್ರವು ಜಾಲಹಳ್ಳಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಲು ನೀಡಿರುವ ಅಂತಿಮ ಅನುಮೋದನೆಯಲ್ಲ. ಬದಲಾಗಿ, ಸಲ್ಲಿಸಲಾದ ಮನವಿಯನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಂಬಂಧಪಟ್ಟ ಅಧಿಕಾ–ರಿಗಳಿಗೆ ನೀಡಿರುವ ಸೂಚನೆಯಾಗಿದೆ. ಮುಂದಿನ ದಿನಗಳಲ್ಲಿ ತಾಲೂಕು ಪಂಚಾಯಿತಿ ಅಧಿಕಾರಿಗಳ ಪರಿಶೀಲನೆ, ನ್ಯಾಯಾಲಯದ ಪ್ರಕರಣದ ಬೆಳವಣಿಗೆಗಳು ಹಾಗೂ ಸರ್ಕಾರದ ನಿಯಮಾನುಸಾರ ಕೈಗೊಳ್ಳುವ ಕ್ರಮಗಳ ಮೇಲೆ ಜಾಲಹಳ್ಳಿಯ ಪುರಸಭೆ ಬೇಡಿಕೆಯ ಮುಂದಿನ ಹಂತಗಳು ಅವಲಂಬಿತವಾಗಿವೆ.

ಜಿಲ್ಲಾಡಳಿತದ ಈ ಸ್ಪಂದನೆಯಿಂದ ಜಾಲಹಳ್ಳಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇ–ರಿಸಬೇಕೆಂದು ಆಗ್ರಹಿಸುತ್ತಿರುವ ಹೋರಾಟಗಾರರು ಹಾಗೂ ಸ್ಥಳೀಯ ಜನರಲ್ಲಿ ಹೊಸ ನಿರೀಕ್ಷೆ ಮೂಡಿದೆ. ಹಲವು ವರ್ಷಗಳಿಂದ ತಾಲೂಕು ಕೇಂದ್ರದ ಬೇಡಿಕೆ ಈಡೇರದೆ ಉಳಿದಿರುವ ಹಿನ್ನೆಲೆಯಲ್ಲಿ, ಕನಿಷ್ಠ ಪುರಸಭೆ ಸ್ಥಾನಮಾನವಾದರೂ ದೊರೆಯಲಿದೆಯೇ ಎಂಬುದನ್ನು ಜನರು ಕಾತರದಿಂದ ಎದುರು ನೋಡುತ್ತಿದ್ದಾರೆ.

ವರದಿ: ಖಾಜಾ ಹುಸೇನ್ ಬಾಬಾ, ಜಾಲಹಳ್ಳಿ

ಪುರಸಭೆ ಸ್ಥಾನಮಾನಕ್ಕೆ ಜನರ ನಿರೀಕ್ಷೆ

ಜಾಲಹಳ್ಳಿ ಪಟ್ಟಣದಲ್ಲಿ ಅಂದಾಜು 20 ಸಾವಿರದಿಂದ 25 ಸಾವಿರದವರೆಗೆ ಜನಸಂಖ್ಯೆ ಇದ್ದು, ಗ್ರಾಮ ಪಂಚಾಯಿತಿಯಲ್ಲಿ 33 ಸದಸ್ಯರಿದ್ದಾರೆ. ಎರಡು ಪದವಿಪೂರ್ವ ಕಾಲೇಜುಗಳು, ಎರಡು ಪದವಿ ಕಾಲೇಜುಗಳು, ವಿಸ್ತರಿಸುತ್ತಿರುವ ವ್ಯಾಪಾರ–ವಹಿವಾಟು ಹಾಗೂ ಹೆಚ್ಚುತ್ತಿರುವ ಜನಸಂಖ್ಯೆಯ ಹಿನ್ನೆಲೆಯಲ್ಲಿ ಜಾಲಹಳ್ಳಿಯನ್ನು ಪುರಸಭೆಯಾಗಿ ಮೇಲ್ದರ್ಜೆಗೇರಿಸಬೇಕೆಂಬ ಬೇಡಿಕೆ ಹಲವು ವರ್ಷಗಳಿಂದ ಕೇಳಿಬರುತ್ತಿದೆ. ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಜಾಲಹಳ್ಳಿಯಲ್ಲಿ ಜನಸಂಖ್ಯೆ ಮತ್ತು ವಾಣಿಜ್ಯ ಚಟುವಟಿಕೆಗಳು ಹೆಚ್ಚುತ್ತಿರುವುದರಿಂದ ರಸ್ತೆ, ಚರಂಡಿ, ಕುಡಿಯುವ ನೀರು, ಸ್ವಚ್ಛತೆ ಸೇರಿದಂತೆ ಮೂಲಭೂತ ನಾಗರಿಕ ಸೌಲಭ್ಯಗಳ ಅಭಿವೃದ್ಧಿಗೆ ಪುರಸಭೆ ಸ್ಥಾನಮಾನ ನೆರವಾಗಬಹುದು ಎಂಬ ನಿರೀಕ್ಷೆ ಸ್ಥಳೀಯರಲ್ಲಿದೆ.

ಹಿಂದಿನ ಸರ್ಕಾರದ ಅವಧಿಯಲ್ಲಿ ಪಟ್ಟಣ ಪಂಚಾಯಿತಿ ಮೇಲ್ದರ್ಜೆ ಪ್ರಕ್ರಿಯೆ

ಹಿಂದಿನ ಸರ್ಕಾರದ ಅವಧಿಯಲ್ಲಿ ಜಾಲಹಳ್ಳಿ ಗ್ರಾಮ ಪಂಚಾಯಿತಿಯನ್ನು ಪಟ್ಟಣ ಪಂಚಾಯಿತಿಯಾಗಿ ಮೇಲ್ದರ್ಜೆಗೇರಿಸುವ ಪ್ರಕ್ರಿಯೆ ನಡೆದಿತ್ತು. ಆದರೆ, ಈ ಸಂಬಂಧದ ಪ್ರಕರಣ ನ್ಯಾಯಾಲಯದಲ್ಲಿರುವುದರಿಂದ ಮುಂದಿನ ಬೆಳವಣಿಗೆಗಳ ಬಗ್ಗೆ ಸ್ಪಷ್ಟತೆ ಮೂಡಬೇಕಿದೆ. ಹಿಂದಿನ ಮೇಲ್ದರ್ಜೆ ಪ್ರಕ್ರಿಯೆ, ನ್ಯಾಯಾಲಯದ ಪ್ರಕರಣದ ಸ್ಥಿತಿ ಹಾಗೂ ಇದೀಗ ಸಲ್ಲಿಸಲಾಗಿರುವ ಪುರಸಭೆ ಬೇಡಿಕೆಯ ಹಿನ್ನೆಲೆಯಲ್ಲಿ ಮುಂದಿನ ಆಡಳಿತಾತ್ಮಕ ಕ್ರಮಗಳು ಯಾವ ದಿಕ್ಕಿನಲ್ಲಿ ಸಾಗಲಿವೆ ಎಂಬ ಕುತೂಹಲ ಮೂಡಿದೆ. ನ್ಯಾಯಾಲಯದ ಪ್ರಕರಣದ ಪ್ರಸ್ತುತ ಸ್ಥಿತಿ ಮತ್ತು ಆದೇಶಗಳ ಕುರಿತು ಅಧಿಕೃತ ಮಾಹಿತಿ ಲಭ್ಯವಾದ ಬಳಿಕವೇ ಈ ವಿಚಾರದಲ್ಲಿ ಸ್ಪಷ್ಟ ಚಿತ್ರಣ ದೊರೆಯಲಿದೆ.

ವಚನ ದರ್ಶನ

ನಾನೊಂದ ನೆನೆದೊಡೆ ತಾನೊಂದ ನೆನೆವುದು,ನಾನಿತ್ತಲೆಳೆದೊಡೆ ತಾನತ್ತಲೆಳೆವುದು.ತಾ ಬೇರೆ ಎನ್ನನಳಲಿಸಿ ಕಾಡಿತ್ತು,ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು.ಕೂಡಲ ಸಂಗನ ಕೂಡಿಹೆನೆಂದೊಡೆತಾನೆನ್ನ ಮುಂದುಗೆಡಿಸಿತ್ತು ಮಾಯೆ!

ನಾನೊಂದ ನೆನೆದೊಡೆ ತಾನೊಂದ ನೆನೆವುದು'' ಎಂಬುದು 12ನೇ ಶತಮಾನದ ಸಾಮಾಜಿಕ ಹಾಗೂ ಧಾರ್ಮಿಕ ಕ್ರಾಂತಿಯ ಹರಿಕಾರ, ವಿಶ್ವಗುರು ಬಸವಣ್ಣನವರ ಒಂದು ಅತ್ಯಂತ ಜನಪ್ರಿಯ ಮತ್ತು ಅರ್ಥಗರ್ಭಿತ ವಚನವಾಗಿದೆ.ಲೋಕರೂಢಿಯಲ್ಲಿ ಈ ಸಾಲನ್ನು ನಾವು ಯಾವುದಾದರೂ ಅಂದುಕೊಂಡ ಕೆಲಸವು ಅಡ್ಡಿ-ಆತಂಕಗಳಿಂದ ಅಂದುಕೊಂಡಂತೆ ಆಗದಿದ್ದಾಗ "ನಾನೊಂದು ನೆನೆದರೆ ದೈವವೊಂದು ನೆನೆದಂತೆ" ಎಂಬ ಗಾದೆಯ ರೂಪದಲ್ಲೂ ಬಳಸುತ್ತೇವೆ. ಆದರೆ, ಬಸವಣ್ಣನವರು ಈ ವಚನದಲ್ಲಿ ಮಾನವನ ಮನಸ್ಸಿನ ಚಂಚಲತೆ ಮತ್ತು 'ಮಾಯೆ'ಯ ಪ್ರಭಾವವನ್ನು ಅದ್ಭುತವಾಗಿ ಚಿತ್ರಿಸಿದ್ದಾರೆ.

ಪಂಪಯ್ಯಸ್ವಾಮಿ ಸಾಲಿಮಠ ಅಂತರಗಂಗಿ-ಸಿಂಧನೂರು. 998094144

ಎನ್‌ಎಸ್‌ಎಸ್ ಶಿಬಿರ ಬದುಕಿನ ಮೌಲ್ಯಗಳನ್ನ ಕಲಿಸುತ್ತದೆ: ಆರ್.ಸಿ.ಪಾಟೀಲ್ ಅಭಿಪ್ರಾಯ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ಎನ್‌ಎಸ್‌ಎಸ್ ಕಾರ್ಯಕ್ರಮವು ವಿದ್ಯಾರ್ಥಿಗಳನ್ನು ಜೀವನದುದ್ದಕ್ಕೂ ಹಂತ ಹಂತವಾಗಿ ಬಹಳ ಎತ್ತರಕ್ಕೆ ಕೊಂಡಯುತ್ತದೆ ಎನ್‌ಎಸ್‌ಎಸ್ ಶಿಬಿರಾರ್ಥಿಗಳನ್ನು ಜಿಲ್ಲಾಮಟ್ಟ ರಾಜ್ಯಮಟ್ಟ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ವಿದ್ಯಾರ್ಥಿಗಳ ಕೌಶಲ್ಯಗಳನ್ನು ಬೆಳೆಸಲು ಸಹಕಾರಿ ಗಣರಾಜ್ಯೋತ್ಸವದ ಪೆರೇಡ್ ನಲ್ಲಿ ಭಾಗವಹಿಸುವ ಅವಕಾಶವನ್ನು ಕಲ್ಪಿಸಿ ಕೊಡುತ್ತದೆ.

ಆದ್ದರಿಂದ ಎನ್ ಎಸ್ ಎಸ್ ವಿದ್ಯಾರ್ಥಿಗಳ ಜೀವನದ ಸರ್ವಾಂಗಿಣ ಅಭಿವೃದ್ಧಿಯನ್ನು ಸಾಧಿಸುತ್ತದೆ. ಪಾಟೀಲ್ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ



ಆರ್.ಸಿ.ಪಾಟೀಲ್ ಹೇಳಿದರು. ನಗರದ ಎಕ್ಸಲೆಂಟ್ ಪದವಿ ಪೂರ್ವ ಕಾಲೇಜಿನ ಎನ್‌ಎಸ್‌ಎಸ್ ವಿಶೇಷ ವಾರ್ಷಿಕ ಶಿಬಿರದ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು. ಹಾಗೂ ಎನ್.ಎಸ್.ಎಸ್ ಕಾರ್ಯಕ್ರಮದ ಅಧಿಕಾರಿ ಮಹಿಬೂಬ್ ಶಿಬಿರಾರ್ಥಿಗಳ ಕು-ರಿತು ಮಾತನಾಡಿ, ವಿದ್ಯಾರ್ಥಿಗಳ ದೆಸೆಯಿಂದ ನಾಯಕತ್ವದ ಬೆಳವಣಿಗೆ ಸಮಾಜಕ್ಕೆ ಒಳ್ಳೆಯ ಪ್ರಜೆಯಾಗಿ ಬೆಳೆಯಲು ಈ ಎನ್.ಎಸ್.ಎಸ್ ವಾರ್ಷಿಕ ಶಿಬಿರಗಳು ಬುನಾದಿಯಾಗಿವೆ ಎಂದರು.

ಈ ಕಾರ್ಯಕ್ರಮದಲ್ಲಿ: ಎಕ್ಸಲೆಂಟ್ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಜಮೀಲ್ ಅಹ್ಮದ್, ಉಪನ್ಯಾಸಕರಾದ ಅಯ್ಯಣ್ಣ ಬಡಿಗೇರ್, ವಿನಯ್ ಕುಮಾರ ಹಿರೇಮಠ, ಆನಂದ ಮಲ್ಲಾಪುರ, ಹನುಮಂತಪ್ಪ ಸುಕಾಲಪೇಟೆ, ಮನೋಹರ್ ಕುನಟಗಿ ಕು.ಅನಿಲಕುಮಾರ್, ಹಾಗೂ ಎನ್‌ಎಸ್-ಎಸ್ ಶಿವರಾರ್ಥಿಗಳು ಉಪಸ್ಥಿತರಿದ್ದರು.

ಗಣೇಶ ವಿಸರ್ಜನೆ ದುರಂತದಲ್ಲಿ ಮೃತಪಟ್ಟವರಿಗೆ ಪರಿಹಾರಕ್ಕೆ ಕನ್ನಡ ಸೇನೆ ಕರ್ನಾಟಕ ಒತ್ತಾಯ

ನೈಜ್ಯ ದೆಸೆ ನ್ಯೂಸ್

ಸಿರವಾರ: ರಾಯಚೂರು ಮಹಾನಗರ ಪಾಲಿಕೆ ವಾರ್ಡ್ ನಂ.13 ರ ಜಹೀರಾಬಾದ್ ಬಡಾವಣೆಯಲ್ಲಿ 18 ಸೆ ರಂದು ಮಧ್ಯರಾತ್ರಿ ನಡೆದ ಗಣೇಶ ವಿಸರ್ಜನೆ ದುರಂತದಲ್ಲಿ ಮೃತಪಟ್ಟ ಇಬ್ಬರು ಅಪ್ರಾಪ್ತ ಮಕ್ಕಳ ಕುಟುಂಬಕ್ಕೆ ಹಾಗೂ ಗಂಭೀರ ಗಾಯಗೊಂಡ ವ್ಯಕ್ತಿಗೆ ಸೂಕ್ತ ಪರಿಹಾರ, ಜಮೀನು ಮತ್ತು ವಸತಿ ಮಂಜೂರು ಮಾಡುವಂತೆ ಸರ್ಕಾರಕ್ಕೆ ವರದಿ ಸಲ್ಲಿಸಬೇಕು ಎಂದು ಕನ್ನಡ ಸೇನೆ ಕರ್ನಾಟಕ ಒತ್ತಾಯಿಸಿದೆ.

ಕನ್ನಡ ಸೇನೆ ಜಿಲ್ಲಾ ಘಟಕದ ಅಧ್ಯಕ್ಷ ಎಂ. ಬಸವರಾಜ್ ಮರಕಂದಿನ್ನಿ ನೇತೃತ್ವದಲ್ಲಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಘಟನೆ ವಿವರ: ವಿಸರ್ಜನಾ ಮೆರವಣಿಗೆ ವೇಳೆ ಟ್ರಾಕ್ಟರ್ ಮೂಲಕ ಗಣೇಶ ಮೂರ್ತಿ ಕೊಂಡೊಯ್ಯುತ್ತಿದ್ದಾಗ ಚಾಲಕನ ಪಕ್ಕ ಕುಳಿತಿದ್ದ ಇಬ್ಬರು ಬಾಲಕರು ಆಯತಪ್ಪಿ ಕೆಳಗೆ ಬಿದ್ದು, ಟ್ರಾಕ್ಟರ್ ಚಕ್ರಕ್ಕೆ ಸಿಲುಕಿ ಸ್ಥಳದಲ್ಲೇ ಮೃತಪಟ್ಟಿದ್ದರು.

ಮೃತ: ಸುಚಿತ್ ಕುಮಾರ್ (12 ವರ್ಷ) ತಂದೆ ಶ್ರೀನಿವಾಸ, ಜಹೀರಾಬಾದ್
ಮೃತ: ಚರಣ್ ಕುಮಾರ್ (13 ವರ್ಷ) ತಂದೆ ರಮೇಶ್, ಜಹೀರಾಬಾದ್
ಗಂಭೀರ ಗಾಯಾಳು: ವಿಜಯಕುಮಾರ್ (35 ವರ್ಷ) ತಂದೆ ಹನುಮಂತ, ರಿಮ್ಸ್ ನಲ್ಲಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಇವರೆಲ್ಲ ಪರಿಶಿಷ್ಟ ಜಾತಿ (ಮಾದಿಗ ಸಮುದಾಯ)ಕ್ಕೆ ಸೇ-ರಿದ ಬಡ ಕುಟುಂಬಗಳಾಗಿದ್ದು, ಬಾಡಿಗೆ ಮನೆಯಲ್ಲಿ ವಾಸವಾಗಿದ್ದು, ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದಾರೆ. ಅವರಿಗೆ ಸ್ವಂತ ಜಮೀನು, ಮನೆ ಇಲ್ಲ.



ಮೃತ ಬಾಲಕರ ಕುಟುಂಬಕ್ಕೆ ತಲಾ ರೂ.10 ಲಕ್ಷ ಹಾಗೂ ಗಾಯಾಳು ಕುಟುಂಬಕ್ಕೆ ರೂ.5 ಲಕ್ಷ ಪರಿಹಾರ, ಜೊತೆಗೆ ಮನೆ ಮತ್ತು ಜಮೀನು ಮಂಜೂರು ಮಾಡಬೇಕು ಎಂದು ಮನವಿಯಲ್ಲಿ ಒತ್ತಾಯಿಸಲಾಗಿದೆ.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ನಾಗಪ್ಪ ರಾಯಚೂರು, ನಗರ ಘಟಕ ಅಧ್ಯಕ್ಷ ಮಂಜುನಾಥ್, ಹನುಮೇಶ್ ನಾಯಕ ಮೇಟಿ, ಗೋವಿಂದ ಚೌಹಾಣ್, ಮೃತ ಬಾಲಕನ ತಂದೆ ಶ್ರೀನಿವಾಸ್ ಮತ್ತಿತರರು ಇದ್ದರು.

ರೇಡಿಯೇಶನ್ ಮೊಬೈಲ್ ನೆಟ್ವರ್ಕ್ ಟವರ್ ಬೇರೆಡೆಗೆ ಸ್ಥಳಾಂತರಿಸಲು ವಾರ್ಡ್ ನಂ-30ರ ನಿವಾಸಿಗರ ಮನವಿ

ನೈಜ್ಯ ದೆಸೆ ನ್ಯೂಸ್

ಸಿಂಧನೂರು: ನಗರದ ಒಳಬಳ್ಳಾರಿ ರಸ್ತೆಯಲ್ಲಿರುವ ವಾರ್ಡ್ ನಂ-30 ರ ಸರ್ವೆ ನಂ-69 ರಲ್ಲಿ ಅನಧಿಕೃತವಾಗಿ ಮೊಬೈಲ್ ನೆಟ್ವರ್ಕ್ ಟವರ್ ಹಾಕಿ, ಅಲ್ಲಿ ವಾಸ ಮಾಡುವ ನಿವಾಸಿಗಳಿಗೆ ನೆಟ್ವರ್ಕ್ ರೇಡಿಯೇಶನ್ ನಿಂದಾಗಿ ಆರೋಗ್ಯ ಹಾಳಾಗುವ ಜೊತೆಗೆ ಮಕ್ಕಳಿಗೆ ಮತ್ತು ಪ್ರಾಣಿ, ಪಕ್ಷಿಗಳಿಗೆ ತೊಂದರೆಯಾಗುತ್ತಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ತಡೆದು ಸ್ಥಳಾಂತರಿಸಿ ಆರೋಗ್ಯ ಕಾಪಾಡಲು ನಿವಾಸಿ ಹುಸೇನಪ್ಪ ಮನವಿ ಮಾಡಿಕೊಂಡರು.



ನಗರದ ಪತ್ರಿಕಾ ಭವನದಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಈ ವಾರ್ಡಿನ ಜನರ ಆರೋಗ್ಯದ ಹಿತದೃಷ್ಟಿಯಿಂದ ಬೇರೆ ಎಲ್ಲಾದರೂ ಇದನ್ನು ಸ್ಥಳಾಂತರಸಿ ಅನುಕೂಲ ಮಾಡಿಕೊಡಬೇಕು. ಅಲ್ಲದೇ 10 ರಿಂದ 15 ಅಡಿ ಉದ್ದವಿರುವ ಟವರ್ ಬಿರುಗಾಳಿಗೆ ಬಿದ್ದರೆ ಯಾರು ಹೊಣೆಗಾರರು ಈ ಕಾರಣವಾಗಿ ಸಂಬಂಧಿಸಿದ ಅಧಿಕಾರಿಗಳು ಟವರ್ ಹಾಕಬಾರದೆಂದು ನೋಟಿಸ್ ಅಂಟಿಸಿ ತಿಳಿಸಿದರು ಯಾರ ಭಯವಿಲ್ಲದೆ ಈಗಾಗಲೇ ಮೊಬೈಲ್ ಟವರ್ ಹಾಕಿದ್ದಾರೆ.ಇದನ್ನು ತೆರವುಗೊಳಿಸಿ ಬೇರೆಡೆಗೆ ಸ್ಥಳಾಂತರಿಸಲು ಮನವಿ ಮಾಡಿದರು. ಈ ಸಂದರ್ಭದಲ್ಲಿ: ನಿವಾಸಿಯ ಮುಖಂಡರಾದ ಮೂಕಪ್ಪ, ನಿಂಗಪ್ಪ, ಹನುಮಂತಪ್ಪ, ಮಾಳಪ್ಪ, ಸೋಮಣ್ಣ, ಸಣ್ಣಮಲ್ಲಪ್ಪ ಮಾಡಗಿರಿ, ಎಚ್.ಎಮ್. ಶರಣಯ್ಯ, ಸೇರಿದಂತೆ ಅನೇಕರಿದ್ದರು.

ದೇಶದಲ್ಲಿನ ಆಂತರಿಕ ಭದ್ರತಾ ಸವಾಲು ಎರಿಸಲು ಸಿದ್ಧರಾಗಿ ; ಗೋವಿಂದ್ ಮೋಹನ್

ನೈಜ್ಯ ದೆಸೆ ನ್ಯೂಸ್

ಹೈದರಾಬಾದ್: ದೇಶವು ದಶಕಗಳಿಂದ ಎದುರಿಸುತ್ತಾ ಬಂದಿದ್ದ ಸಾಂಪ್ರದಾಯಿಕ ಆಂತರಿಕ ಭದ್ರತಾ ಪರಿಸ್ಥಿತಿಯು ಈಗ ಬದಲಾಯಿಸಲಾಗದ ರೀತಿಯಲ್ಲಿ ಮಾರ್ಪಟ್ಟಿದೆ ಎಂದು ಕೇಂದ್ರ ಗೃಹ ಕಾರ್ಯದರ್ಶಿ ಗೋವಿಂದ್ ಮೋಹನ್ ಹೇಳಿದ್ದಾರೆ.



ಇಲ್ಲಿನ ಸರ್ದಾರ್ ವಲ್ಲಭಭಾಯಿ ರಾಷ್ಟ್ರೀಯ ಪೊಲೀಸ್ ಅಕಾಡೆಮಿಯಲ್ಲಿ ನಡೆದ ಐಪಿಎಸ್‌ನ 78ನೇ ನಿಯಮಿತ ನೇಮಕಾತಿ ಬ್ಯಾಚ್‌ನ ದೀಕ್ಷಾಂತ ಪರೇಡ್ (ತರಬೇತಿ ಮುಕ್ತಾಯ ಸಮಾರಂಭ) ಉದ್ದೇಶಿಸಿ ಮಾತನಾಡಿದ ಅವರು, ಆಂತರಿಕ ಭದ್ರತಾ ಸವಾಲುಗಳ ಪೈಕಿ ಉಗ್ರ ನಕ್ಸಲಿಸಂ ಸಂಪೂರ್ಣವಾಗಿ ಅಂತ್ಯಗೊಂಡಿದೆ ಮತ್ತು ಈಶಾನ್ಯ ಭಾರತದಲ್ಲಿನ ದಂಗೆಗಳು ಅತ್ಯಂತ ಕನಿಷ್ಠ ಮಟ್ಟಕ್ಕೆ ಇಳಿದಿವೆ ಎಂದು ತಿಳಿಸಿದರು. ದೇಶದ ಒಳಗೇ ಹುಟ್ಟಿಕೊಂಡ ಭಯೋತ್ಪಾದನೆ ಬಹುತೇಕ ಕೊನೆಗೊಂಡಿದೆ. ಹಾಗೆಯೇ, ವಿದೇಶಿ ಪ್ರೇ-ರಿತ ಭಯೋತ್ಪಾದನೆಯೂ ದೇಶದ ಬೇರೆ ಯಾವುದೇ ಭಾಗದಲ್ಲಿ ಈಗ ಕಂಡುಬರುತ್ತಿಲ್ಲ ಎಂದು ಅವರು ಹೇಳಿದರು. ಮಾದಕವಸ್ತುಗಳ ಕಳ್ಳಸಾಗಣೆ, ಸೈಬರ್ ಅಪರಾಧಗಳು ಮತ್ತು ಅಕ್ರಮ ವಲಸೆಯಂತಹ ಹೊಸ ಆಂತರಿಕ ಭದ್ರತಾ ಸವಾಲುಗಳನ್ನು ಎದುರಿಸಲು ಸಿದ್ಧರಾಗುವಂತೆ ತರಬೇತಿ ಪೂರ್ಣಗೊಳಿಸಿದ ಐಪಿಎಸ್ ಅಧಿಕಾರಿಗಳಿಗೆ ಮೋಹನ್ ಕರೆ ನೀಡಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ತಾಲೂಕು ಯೋಜನಾ ಕಚೇರಿಯಲ್ಲಿ ದಸರಾ ಮಹೋತ್ಸವ: ಶ್ರದ್ಧಾಭಕ್ತಿಯ ಆಯುಧ ಪೂಜೆ, ವಾಹನ ಪೂಜೆ

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ / ಕಂಪ್ಲಿ: ಇಲ್ಲಿನ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಬಿ.ಸಿ. ಟ್ರಸ್ಟ್ ತಾಲೂಕು ಯೋಜನಾ ಕಚೇರಿಯಲ್ಲಿ ದಸರಾ ಹಬ್ಬದ ಪ್ರಯುಕ್ತ ದಸರಾ ಮಹೋತ್ಸವ ಹಾಗೂ ಆಯುಧ ಪೂಜಾ ಕಾರ್ಯಕ್ರಮವನ್ನು ಶನಿವಾರ (ಅ. 17) ಅತ್ಯಂತ ಸಡಗರ-ಸಂಭ್ರಮದಿಂದ ಆಚರಿಸಲಾಯಿತು.

ದಸರಾ ಮಹೋತ್ಸವದ ಅಂಗವಾಗಿ ಕಚೇರಿಯ ಸಭಾಂಗಣವನ್ನು ತಳಿರು-ತೋರಣಗಳು, ಹೂವುಗಳು ಹಾಗೂ ಬಣ್ಣ-ಬಣ್ಣದ ಅಲಂಕಾರಗಳಿಂದ ವೈಭವಯುತವಾಗಿ ಅಲಂಕರಿಸಲಾಗಿತ್ತು. ಮಂಟಪದ ಮಧ್ಯಭಾಗದಲ್ಲಿ ಶ್ರೀ ದೇವಿಯ ಭಾವಚಿತ್ರವನ್ನಿಟ್ಟು, ನಂದಾದೀಪ ಬೆಳಗಿಸಿ, ಸಾಂಪ್ರದಾಯಿಕ ಶೈಲಿಯಲ್ಲಿ ಹೂವಿನ ರಂಗೋಲಿ ಹಾಕಿ ವಿಶೇಷ ಪೂಜೆ ಮತ್ತು ಮಹಾಮಂಗಳಾರತಿಯನ್ನು ನೆರವೇ-ರಿಸಲಾಯಿತು. ಇದೇ ಸಂದರ್ಭದಲ್ಲಿ ಕಚೇರಿಯ



ಅಧಿಕೃತ ವಾಹನಗಳು ಹಾಗೂ ಸಿಬ್ಬಂದಿಗಳ ವಾಹನಗಳನ್ನು ತೊಳೆದು, ಹೂವಿನ ಹಾರ ಹಾಕಿ, ನಿಂಬೆಹಣ್ಣು ಇಟ್ಟು ಶಾಸ್ತ್ರೋಕ್ತವಾಗಿ ವಾಹನ ಪೂಜೆ ನೆರವೇರಿಸಿ ಸುರಕ್ಷತೆಗಾಗಿ ಪ್ರಾರ್ಥಿಸಲಾಯಿತು. ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಕಂಪ್ಲಿ ತಾಲೂಕು ಯೋಜನಾಧಿಕಾರಿ ಎಲ್. ರಾಘವೇಂದ್ರ ರವರು ಮಾತನಾಡಿ, "ನವರಾತ್ರಿಯ ದಸರಾ ಮಹೋತ್ಸವವು ಒಳಿತಿನ ವಿಜಯವನ್ನು ಸಾರುವ ಪವಿತ್ರ ಹಬ್ಬವಾಗಿದೆ.

ನಮ್ಮ ದೈನಂದಿನ ಕಾಯಕಕ್ಕೆ ಆಸರೆಯಾಗಿರುವ ಆಯುಧಗಳು ಮತ್ತು ವಾಹನಗಳನ್ನು ಗೌರವಿಸುವ ಮೂಲಕ ಕೃತಜ್ಞತೆ ಸಲ್ಲಿಸುವುದು ನಮ್ಮ ಸಂಸ್ಕೃತಿಯಾಗಿದೆ. ಪೂಜ್ಯ ಖಾವಂದರ ಮಾರ್ಗದರ್ಶನದಲ್ಲಿ ನಮ್ಮ ಕಚೇ-ರಿಯು ಇಂತಹ ಧಾರ್ಮಿಕ ಆಚರಣೆಗಳ ಮೂಲಕ ಸಿಬ್ಬಂದಿ ವರ್ಗದಲ್ಲಿ ಆಧ್ಯಾತ್ಮಿಕ ಚೇತನ ಹಾಗೂ ಸಾಮರಸ್ಯವನ್ನು ಬೆಳೆಸುತ್ತಾ ಬಂದಿದೆ," ಎಂದು ಶುಭ ಹಾರೈಸಿದರು. ಈ ಸಂದರ್ಭದಲ್ಲಿ ಕೃಷಿ ಅಧಿಕಾರಿ ಎಸ್. ಬಿ. ಸಂಜೀವ ಕುಮಾರ್, ಒಕ್ಕೂಟದ ಅಧ್ಯಕ್ಷೆ ನಿರ್ಮಲಾ ಸಮನ್ವಯಾಧಿಕಾರಿ ಮಂಜುಳಾ, ಮೇಲ್ವಿಚಾರಕಿ ಮಂಜುಳಾ, ಕಚೇರಿಯ ವ್ಯವಸ್ಥಾಪಕರು, ವಿವಿಧ ವಲಯಗಳ ಮೇಲ್ವಿಚಾರಕರು ಹಾಗೂ ಸೇವಾ ಪ್ರತಿನಿಧಿಗಳು, ಸೇರಿದಂತೆ ಕಚೇರಿ ಸಿಬ್ಬಂದಿ, ವರ್ಗದವರು ಸಾಂಪ್ರದಾಯಿಕ ಶ್ವೇತ ವಸ್ತ್ರ ಹಾಗೂ ರೇಷ್ಮೆ ಸೀರೆಗಳನ್ನು ಧರಿಸಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಪೂಜಾ ವಿಧಿವಿಧಾನಗಳ ನಂತರ ನೆರೆದಿದ್ದ ಸಿಬ್ಬಂದಿ ಹಾಗೂ ಭಕ್ತಾದಿಗಳಿಗೆ ಮಧುರವಾದ ತೀರ್ಥಪ್ರಸಾದ ವಿನಿಯೋಗಿಸಲಾಯಿತು.

ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆ?2026ರ ಹಿನ್ನೆಲೆ – ಶರಣಪ್ಪ ಮಟ್ಟೂರು ಪರ ಡಿ ಎಸ್ ಹುಲಗೇರಿ ಮತಯಾಚನೆ

ನೈಜ್ಯ ದೆಸೆ ನ್ಯೂಸ್

ಲಿಂಗಸಗೂರು: ಪಟ್ಟಣದ ಉಟಕನೂರು ಬಸವಲಿಂಗ ತಾತಾ ಶಿಕ್ಷಣ ಸಂಸ್ಥೆ ಹಾಗೂ ಶ್ರೀ ಉಮಾಮಹೇಶ್ವರ ಶಿಕ್ಷಣ ಸಂಸ್ಥೆಯ ಕಾಲೇಜಿನಲ್ಲಿ ಈಶಾನ್ಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾದ ಶರಣಪ್ಪ ಮಟ್ಟೂರು ಅವರಿಗೆ ಬೆಂಬಲ ನೀಡುವಂತೆ ಶಿಕ್ಷಕರಲ್ಲಿ ಮನವಿ ಮಾಡಿ ಮತಯಾಚನೆ ಮಾಡಲಾಯಿತು.

ಈ ವೇಳೆ ಮಾತನಾಡಿದ ಕೆಪಿಸಿಸಿ ರಾಜ್ಯ ಉಪಾಧ್ಯಕ್ಷರು ಹಾಗೂ ಮಾಜಿ ಶಾಸಕರಾದ ಡಿ.ಎಸ್. ಹೂಲಗೇರಿ ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದಿಸುವ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವ ಹಾಗೂ ಶಿಕ್ಷಕರ



ಹಕ್ಕುಗಳ ರಕ್ಷಣೆಗೆ ಬದ್ಧರಾಗಿರುವ ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಶರಣಪ್ಪ ಮಟ್ಟೂರು ಅವ-ರಿಗೆ ತಮ್ಮ ಅಮೂಲ್ಯ ಮತವನ್ನು ನೀಡುವಂತೆ ಮನವಿ ಮಾಡಿದರು. ಶಿಕ್ಷಕರ ಸಮಸ್ಯೆಗಳಿಗೆ ಸೂಕ್ತ ಪರಿಹಾರ ಕಲ್ಪಿಸುವುದು, ಶಿಕ್ಷಣ ಕ್ಷೇತ್ರದ ಸುಧಾರಣೆ, ಶಿಕ್ಷಕರ ಸೇವಾ ಹಿತಾಸಕ್ತಿಗಳ ರಕ್ಷಣೆ ಹಾಗೂ ಶಿಕ್ಷಕರ ಧ್ವನಿಯನ್ನು ವಿಧಾನ ಪರಿಷತ್ತಿನಲ್ಲಿ ಪರಿಣಾಮಕಾ-ರಿಯಾಗಿ ಪ್ರತಿನಿಧಿಸುವ ಉದ್ದೇಶದಿಂದ ಈ ಮತಯಾಚನೆ ಮಾಡಿದರು ಈ ಸಂದರ್ಭದಲ್ಲಿ ಲಿಂಗಸಗೂರು ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಗೋವಿಂದ ನಾಯಕ, ಲಿಂಗಸಗೂರು ಬ್ಲಾಕ್ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ ಮಹ್ಮದ್ ರಫೀ, ಸಂಜೀವಪ್ಪ ಚಲುವಾದಿ,

ಉಟಕನೂರು ಬಸವಲಿಂಗ ತಾತಾ ಶಿಕ್ಷಣ ಸಂಸ್ಥೆ ಅಧ್ಯಕ್ಷ ಸಂಜೀವ ಕುಮಾರ ಕಂದಗಲ್ ಹಾಗೂ ಉಮಾ ಮಹೇಶ್ವರ ಶಿಕ್ಷಣ ಸಮೂಹ ಸಂಸ್ಥೆಯ ಆಡಳಿತಾಧಿಕಾರಿ ವಿನಯ ಕುಮಾರ ಗಣಚಾರಿ, ಕಾಂಗ್ರೆಸ್ ಪಕ್ಷದ ಹಿರಿಯ ಮುಖಂಡ ಜೀವನ ಕುಮಾರ ಬಾಳೆಗೌಡ, ರಾಜಶೇಖರ ಪಲ್ಲೆದ್, ನವಾಬ್, ಇಕ್ಬಾಲ್ ಸಾಬ, ಕರಿಬಸನಗೌಡ, ನಜೀರ ಸಾಬ್ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಮಾರಾಟ: ಮೂವರು ಆರೋಪಿಗಳಿಗೆ 1 ವರ್ಷ ಕಠಿಣ ಕಾರಾಗೃಹ ಶಿಕ್ಷೆ

ರಾಯಚೂರು ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಿಂದ ತೀರ್ಪು । ತಲಾ 25,000 ದಂಡ ವಿಧಿಸಿ ಆದೇಶ

ನೈಜ್ಯ ದೆಸೆ ನ್ಯೂಸ್

ರಾಯಚೂರು: ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಸಂಗ್ರಹಿಸಿ ಮಾರಾಟ ಮಾಡುತ್ತಿದ್ದ ಪ್ರಕರಣದಲ್ಲಿ ಮೂವರು ಆರೋಪಿಗಳಿಗೆ ರಾಯಚೂ-ರಿನ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯವು ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ತಲಾ ?25,000 ದಂಡ ವಿಧಿಸಿ ತೀರ್ಪು ನೀಡಿದೆ.

ರಾಯಚೂರು ಗ್ರಾಮೀಣ ಪೊಲೀಸ್ ಠಾಣಾ ವ್ಯಾಪ್ತಿಯ ಮನ್ನಲಾಪೂರ?ರಾಯಚೂರು ರಸ್ತೆಯ ಮನ್ನಲಾಪೂರ ರೈಲ್ವೆ ಗೇಟ್ ಸಮೀಪ ಸಾರ್ವಜನಿಕ ಸ್ಥಳದಲ್ಲಿ ಗಾಂಜಾ ಇಟ್ಟುಕೊಂಡು ಮಾರಾಟ ಮಾಡಲಾಗುತ್ತಿದೆ ಎಂಬ ಖಚಿತ ಮಾಹಿತಿಯ ಮೇರೆಗೆ ಪೊಲೀಸರು ದಾಳಿ ನಡೆಸಿದ್ದರು. ಈ ವೇಳೆ ಉಮೇಶ ಸೇರಿದಂತೆ ಮೂವರು ಆರೋಪಿಗಳಿಂದ ಸುಮಾರು 1.08 ಕೆ.ಜಿ. ಒಣ ಗಾಂಜಾ, 514 ಗ್ರಾಂ ಹಸಿ ಗಾಂಜಾ, ಮೂರು ಮೊಬೈಲ್ ಫೋನ್‌ಗಳು ಹಾಗೂ ?300 ನಗದನ್ನು ವಶಪಡಿಸಿಕೊಳ್ಳಲಾಗಿತ್ತು. ಈ ಸಂಬಂಧ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಗುನ್ನೆ ಸಂಖ್ಯೆ 76/2024ರ ಅಡಿಯಲ್ಲಿ ಎನ್‌ಡಿಪಿಎಸ್ ಕಾಯ್ದೆ 1985ರ ಸಂಬಂಧಿತ ಕಲಂಗಳಡಿ ಪ್ರಕರಣ ದಾಖಲಿಸಲಾಗಿತ್ತು.

ತನಿಖೆ ಮತ್ತು ನ್ಯಾಯಾಲಯದ ವಿಚಾರಣೆ ಪ್ರಕರಣದ ತನಿಖಾಧಿಕಾರಿಯಾಗಿದ್ದ ಪ್ರಕಾಶ ರೆಡ್ಡಿ ಡಂಬಲ್, ಪೊಲೀಸ್ ಉಪನಿರೀಕ್ಷಕರು (ಈ ಹಿಂದೆ ರಾಯಚೂರು ಗ್ರಾಮೀಣ ಪೊಲೀಸ್ ಠಾಣೆ, ಪ್ರಸ್ತುತ ಯರಗೇರಾ ಪೊಲೀಸ್ ಠಾಣೆ), ಅವರು ತನಿಖೆ ಪೂರ್ಣಗೊಳಿಸಿ



ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ವೇಳೆ ಸಾಕ್ಷ್ಯಾಧಾರಗಳನ್ನು ಪರಿಶೀಲಿಸಿದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಬಿ.ಬಿ. ಜಕಾತಿ ಅವರು ಮೂವರು ಆರೋಪಿಗಳ ವಿರುದ್ಧದ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ, ಎನ್‌ಡಿಪಿಎಸ್ ಕಾಯ್ದೆ 1985ರ ಕಲಂ 20(ಛ)(ಐ)(ಃ) ಅಡಿಯಲ್ಲಿ ತಲಾ ಒಂದು ವರ್ಷ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ?25,000 ದಂಡ ವಿಧಿಸಿ ಆದೇಶಿಸಿದ್ದಾರೆ.

ಪ್ರಕರಣದಲ್ಲಿ ಪೊಲೀಸರ ಕಾರ್ಯಾಚರಣೆ ಪ್ರಕರಣದ ಫಿರ್ಯಾದಿದಾರರಾದ ರವಿರಾಜ್ (ಸಿಹೆಚ್‌ಸಿ-320) ಹಾಗೂ ದಾಳಿಯಲ್ಲಿ ಭಾಗವಹಿಸಿದ್ದ ಜಿ. ಶ್ರೀನಿವಾಸ (ಎಎಸ್‌ಐ) ಅವರು ನ್ಯಾಯಾಲಯದಲ್ಲಿ ಸಾಕ್ಷ್ಯ ನುಡಿದಿದ್ದರು. ಸುಗಯ್ಯ (ಸಿಪಿಸಿ-157), ಮಲ್ಲಿಕಾರ್ಜುನ (ಸಿಪಿಸಿ-360) ಮತ್ತು ಮುಸ್ತಫಾ (ಸಿಪಿಸಿ-632) ಅವರು ನ್ಯಾಯಾಲಯಕ್ಕೆ ಸಾಕ್ಷಿಗಳನ್ನು ಸಕಾಲದಲ್ಲಿ ಹಾಜರುಪಡಿಸುವಲ್ಲಿ ಸಹಕರಿಸಿದ್ದರು. ಪ್ರಕರಣದ ವಿಚಾರಣೆಯ ಸಂದರ್ಭದಲ್ಲಿ ರಾಯಚೂರು ಗ್ರಾಮೀಣ ವೃತ್ತದ ಪೊಲೀಸ್ ವೃತ್ತ ನಿರೀಕ್ಷಕ ನಿಂಗಪ್ಪ ಎನ್.ಆರ್. ಅವರು ಮೇಲುಸ್ತುವಾರಿ ವಹಿಸಿದ್ದರು. ಸರ್ಕಾರದ ಪರವಾಗಿ ಪ್ರಧಾನ ಸಾರ್ವಜನಿಕ ಅಭಿಯೋಜಕ ಕೆ. ಗೋಪಾಲರಾವ್ ಅವರು ವಾದ ಮಂಡಿಸಿದ್ದರು. ಮಾದಕ ವಸ್ತುಗಳ ಅಕ್ರಮ ಮಾರಾಟದ ವಿರುದ್ಧ ಪೊಲೀಸ್ ಇಲಾಖೆ ಕೈಗೊಂಡ ಕ್ರಮ ಹಾಗೂ ನ್ಯಾಯಾಲಯದ ತೀರ್ಪು ಸಾರ್ವಜನಿಕ ಸ್ಥಳಗಳಲ್ಲಿ ಮಾದಕ ವಸ್ತುಗಳ ಮಾರಾಟ ತಡೆಗಟ್ಟುವ ಮಹತ್ವವನ್ನು ಮತ್ತೊಮ್ಮೆ ಎತ್ತಿ ತೋರಿಸಿದೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINT-ERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101